# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 206 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.02.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 206 • PRGI No:KARKAN/2023/88055 • VIJAYANAGARA • 18.02.2025 • Tuesday • Page:04 • Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+ Digital E-PAPER READERS


No.1 HAMPI TIMES LEADING VIJAYANAGARA District News Paper

Contact for Advertisements: 9448633038





## ಆನಂದ ಬಾಣ





Call us For Ads:
94486 33038


# ಫೆ.22 ಕೊಟ್ಟೂರು ಶ್ರೀಗುರು ಬಸವೇಶ್ವರ ಸ್ವಾಮಿ ರಥೋತ್ಸವ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ | ಫೆ.18ರಿಂದ 28ರವರೆಗೆ ವಿವಿಧ ಧಾರ್ಮಿಕ ಕಾರ್ಯ

■ ಹಂಪಿ ಟೈಮ್ಸ್ ಹೊಸಪೇಟೆ



ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನದ ರಥೋತ್ಸವವು ಇದೇ ಫೆ.22 ರಂದು ಜರುಗಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ತಿಳಿಸಿದ್ದಾರೆ.

ಪ್ರತಿ ವರ್ಷದಂತೆ ಈ ವರ್ಷ ಕೂಡ ರಥೋತ್ಸವವನ್ನು ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿದ್ದು, ಫೆ. 18 ರಿಂದ ಫೆ. 28 ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ, ಫೆ. 18 ರಂದು ರಾತ್ರಿ ಬೆಳ್ಳಿರಥದಲ್ಲಿ ನಾಗರ ವಾಹನೋತ್ಸವ ಕಾರ್ಯಕ್ರಮ, ಫೆ. 19 ರಂದು ರಾತ್ರಿ ಬೆಳ್ಳಿ ರಥದಲ್ಲಿ ನವಿಲು ವಾಹನೋತ್ಸವ ಕಾರ್ಯಕ್ರಮ, ಫೆ. 20 ರಂದು ರಾತ್ರಿ ಬೆಳ್ಳಿ ರಥದಲ್ಲಿ ಗಜವಾಹನೋತ್ಸವ ಕಾರ್ಯಕ್ರಮ, ಫೆ.21 ರಂದು ರಾತ್ರಿ ಬೆಳ್ಳಿರಥದಲ್ಲಿ ವೃಷಭ ವಾಹನೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಫೆ.22 ರಂದು ಶ್ರೀ ಸ್ವಾಮಿಯ ಮಹಾ ರಥೋತ್ಸವ ನಡೆಯಲಿದೆ.

ವಿಜಯನಗರ ಜಿಲ್ಲೆಯಲ್ಲಿ ಫೆ.22 ರಂದು ಶ್ರೀ ಸ್ವಾಮಿಯ ಮಹಾ ರಥೋತ್ಸವ ನಡೆಯಲಿದ್ದು ಜಾತ್ರಾ ಮಹೋತ್ಸವದಲ್ಲಿ ಮೂಲಭೂತ ಸೌಕರ್ಯ ಮತ್ತು ಜಾತ್ರಾ ಧಾರ್ಮಿಕ ಕಾರ್ಯದ ಬಗ್ಗೆ, ಪೊಲೀಸ್ ಬಂದೋಬಸ್ತ್ ವ್ಯವಸ್ಥೆ, ಆರೋಗ್ಯ ಸೇವೆ ಮತ್ತು ಸ್ವಚ್ಚತೆ ನೈರ್ಮಲೀಕರಣ, ಕೆಎಸ್‌ಆರ್‌ಟಿಸಿ ವತಿಯಿಂದ ಹೆಚ್ಚುವರಿ ವಿಶೇಷ ವಾಹನಗಳು, ಅಗ್ನಿ ಶಾಮಕ ದಳ ಸೇವೆ, ವಿದ್ಯುತ್ ವ್ಯವಸ್ಥೆ, ದೇವಸ್ಥಾನದ ಧಾರ್ಮಿಕ ಆಚರಣೆಯ ಬಗ್ಗೆ, ಪಟ್ಟಣ ಪಂಚಾಯಿತಿ ವತಿಯಿಂದ ಅಗತ್ಯ ಮೂಲಭೂತ ಸೌಕರ್ಯಗಳು ಒದಗಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾಸೋದ್ಯಮ ಉದ್ಯಮಶೀಲತಾ ತರಬೇತಿ ಪಟ್ಟಿ ಪ್ರಕಟ: ಪ್ರಭುಲಿಂಗ

■ ಹಂಪಿ ಟೈಮ್ಸ್ ಹೊಸಪೇಟೆ

ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರಿಗೆ ಉದ್ಯಮಶೀಲತೆ ತರಬೇತಿ ಹಾಗೂ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟೀನ್ ನಡೆಸಲು ಸಹಾಯಧನ ನೀಡಲು ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ.ಎಸ್.ತಳಕೇರಿ ತಿಳಿಸಿದ್ದಾರೆ.

ಸಹಾಯಧನ ನೀಡಲು ವಿಜಯನಗರ ಜಿಲ್ಲೆಗೆ ನಿಗಧಿಪಡಿಸಿರುವ ಗುರಿಗಳಂತೆ ಅಂತಿಮ ಆಯ್ಕೆಪಟ್ಟಿಯನ್ನು ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಲೋಟಸ್ ಮಹಲ್ ಹತ್ತಿರ, ಕಮಲಾಪುರ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ 08394–295640 ಗೆ ಸಂಪರ್ಕಿಸಲು ತಿಳಿಸಿದ್ದಾರೆ.

## ಶಾಸಕಿ ಲತಾ ಮಲ್ಲಿಕಾರ್ಜುನ್ ಹೇಳಿಕೆ | 371ಜೆ ವಿಶೇಷ ಅನುದಾನ ಅಭಿವೃದ್ಧಿಗೆ ಸಹಕಾರಿ

# ಅಭಿವೃದ್ಧಿಯೇ ಗುರಿ ಸಹನೆ ಇರಲಿ

## 5 ಕೋಟಿ ರೂ ವೆಚ್ಚದಲ್ಲಿ ಹರಪನಹಳ್ಳಿ ಡಿಪೋಗೆ 11 ನೂತನ ಬಸ್



■ ಹಂಪಿ ಟೈಮ್ಸ್ ಹರಪನಹಳ್ಳಿ

ಹರಪನಹಳ್ಳಿ ಕಲ್ಯಾಣ ಕರ್ನಾಟಕ ವ್ಯಾಪ್ತಿಗೆ ಸೇರ್ಪಡೆಗೊಂಡ ಹಿನ್ನಲೆಯಲ್ಲಿ 371ಜೆ ಅನುದಾನ ಲಭ್ಯತೆಯಿಂದ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಹರಪನಹಳ್ಳಿ ಪಟ್ಟಣದಲ್ಲಿ ಶಾಸಕರ ಅನದಾನದಲ್ಲಿನ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಸೋಮವಾರ ಮಾತನಾಡಿದರು. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ನ್ಯಾಯಯುತವಾಗಿ ಅನುದಾನ ತರುವ ಪ್ರಯತ್ನ ನಿರಂತರವಾಗಿದೆ. ಸಹೋದರ ಎಂ.ಪಿ.ರವೀಂದ್ರರವರ ದೂರದೃಷ್ಟಿ ಯೋಚನೆಯಿಂದಾಗಿ ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿದ್ದ ಹರಪನಹಳ್ಳಿಯನ್ನು ಕಲ್ಯಾಣ ಕರ್ನಾಟಕ ವ್ಯಾಪ್ತಿಗೆ ತಂದ ಹಿನ್ನಲೆಯಲ್ಲಿ ಕೆಕೆಆರ್‌ಡಿಬಿಯ 371ಜೆ ವಿಶೇಷ ಅನುದಾನದಿಂದ 5 ಕೋಟಿ ರೂ ವೆಚ್ಚದಲ್ಲಿ 11 ನೂತನ ಬಸ್‌ಗಳನ್ನು ಹರಪನಹಳ್ಳಿ ಡಿಪೋಗೆ ನೀಡಲು ಸಾಧ್ಯವಾಗಿದೆ. ಕ್ಷೇತ್ರದಲ್ಲಿನ ವಿದ್ಯಾರ್ಥಿಗಳ ಸಂಚಾರಕ್ಕೆ ಇದ್ದ ಸಮಸ್ಯೆಗೆ ಪರಿಹಾರವಾಗಿ ಬಸ್ ಖರೀದಿಸಲು ಸ್ಪೂರ್ತಿಯಾಗಿದೆ. ಕ್ಷೇತ್ರದಲ್ಲಿನ 223 ಹಳ್ಳಿಗಳಿಗೂ ಬಸ್ ಸಾರಿಗೆ ಸಂಪರ್ಕ ಕಲ್ಪಿಸಲಾಗುವುದು. ಶೀಘ್ರದಲ್ಲಿ ಹರಪನಹಳ್ಳಿ ಪಟ್ಟಣಕ್ಕೆ 6 ಸಿಟಿ ಬಸ್ ವ್ಯವಸ್ಥೆ ಕಲ್ಪಿಸಲು ನಿಗಮದ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಗ್ರಾಮೀಣ ಭಾಗದಲ್ಲಿನ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು, ಶಾಲಾ ಕೊಠಡಿ ನಿರ್ಮಾಣ ಸೇರಿದಂತೆ ರಸ್ತೆಗಳ ದುರಸ್ಥಿ ಕಾರ್ಯವನ್ನು ಶೀಘ್ರ ಕೈಗೆತ್ತಿಕೊಳ್ಳಲಾಗುವುದು. ಸಾಮಾನ್ಯ ಜನರ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅರಿತು ಕೆಲಸ ಮಾಡುವ ಸಾಮರ್ಥ್ಯ ನನಗಿದೆ, ಆದರೆ ಸಹನಾ ಶಕ್ತಿ ನನ್ನ ಜನತೆಗಿರಲಿ ಎಂದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಎಂ.ರಾಚಪ್ಪ ಮಾತನಾಡಿ, ರಾಜ್ಯದಲ್ಲಿ ಮೊದಲ ಬಾರಿಗೆ ಹರಪನಹಳ್ಳಿ ಶಾಸಕರ ಕಾಳಜಿಯಿಂದಾಗಿ ತಾಲೂಕಿನ ಸಾರಿಗೆ ಘಟಕಕ್ಕೆ ನೂತನ 11 ಬಸ್‌ಗಳನ್ನು ನೀಡಿರುವುದು ಶ್ಲಾಘನೀಯ. ಅನುದಾನ ನೀಡಿದ ಕೇವಲ ಮೂರು ತಿಂಗಳಲ್ಲೇ ಬಸ್‌ಗಳನ್ನು ಡಿಪೋಗೆ ನೀಡುವಲ್ಲಿ ಶಾಸಕರು ಯಶಸ್ವಿಯಾಗಿದ್ದಾರೆ. ಶಾಸಕರು ಶಾಲಾ ಮಕ್ಕಳಿಗೆ ಬಸ್ ಕೊರತೆಗೆ ಸ್ಪಂದಿಸಿ ಬಸ್ ಖರೀದಿಗೆ ಮುಂದಾಗಿರುವುದು ಅವರಲ್ಲಿರುವ ಮಾನವೀಯ ಮೌಲ್ಯಗಳಿಗೆ ನೀಡಿರುವ ಆದ್ಯತೆ ಆಗಿದೆ. ಶಕ್ತಿ ಯೋಜನೆಯಿಂದ ಕೆಎಸ್‌ಆರ್‌ಟಿಸಿಗೆ

>>4

# ಕನ್ನಡ ವಿವಿ ತಳಸಮುದಾಯಗಳತ್ತ ಬೆಳಕು ಚೆಲ್ಲಿದೆ

## ಭಾಷಾ ನಿಕಾಯದ ಡೀನ್ ಡಾ. ಎಫ್.ಟಿ. ಹಳ್ಳಿಕೇರಿ ಹೇಳಿಕೆ | ವಿಶೇಷ ಉಪನ್ಯಾಸ

■ ಹಂಪಿ ಟೈಮ್ಸ್ ಹೊಸಪೇಟೆ

ಅಲೆಮಾರಿ ಕುರಿಗಾಹಿ ಸಮುದಾಯವು ಅಪರೂಪದ ಸಮುದಾಯವಾಗಿದ್ದು, ಇವುಗಳ ಕುರಿತು ಅಧ್ಯಯನ ಮಾಡುವ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನೆಯ ಆಕಾರವನ್ನು ತಾವೇ ಸೃಷ್ಟಿಸಬೇಕು ಎಂದು ಭಾಷಾ ನಿಕಾಯದ ಡೀನ್ ಡಾ.ಎಫ್.ಟಿ. ಹಳ್ಳಿಕೇರಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ಸಮಾಜಮುಖಿ ತಿಂಗಳ ಮಾತು–6 ಕಾರ್ಯಕ್ರಮದಲ್ಲಿ ಕುರಿಗಾಹಿಗಳ ಬದುಕು ಮತ್ತು ಬವಣೆ ಕುರಿತು ಉಪನ್ಯಾಸದಲ್ಲಿ ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯವು ಇದುವರೆಗೂ ಹಲವಾರು ತಳ ಸಮುದಾಯಗಳು ಮತ್ತು



ಬುಡಕಟ್ಟು ಸಮುದಾಯಗಳ ಕುರಿತು ಸಂಶೋಧನೆಗಳನ್ನು ನಡೆಸುವ ಮೂಲಕ ಆ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಕೆಲಸದಲ್ಲಿ ಕನ್ನಡ ವಿಶ್ವವಿದ್ಯಾಲಯ ತೊಡಗಿಕೊಂಡಿದೆ ಎಂದರು.

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಯರ್ರಿಸ್ವಾಮಿ ಮಾತನಾಡಿ, ಸಂಶೋಧಕರು ಕುರಿಗಾಹಿ ಸಮುದಾಯದ ವಿಶಿಷ್ಟತೆ ಮತ್ತು ಧಾರ್ಮಿಕ ಆಚರಣೆಗಳ ಕುರಿತು ಸಂಶೋಧನೆಗೆ ಪೂರಕ ದತ್ತಾಂಶಗಳನ್ನು ಸಂಗ್ರಹಣೆಯಲ್ಲಿ ತೊಡಗಿಕೊಳ್ಳಬೇಕು. ಜ್ಞಾನವನ್ನು ವೃದ್ಧಿಸಲು ತಾವೇ ಅಧ್ಯಯನ ಸೂತ್ರಗಳನ್ನು ಹುಡುಕಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪಿಎಚ್.ಡಿ ಸಂಶೋಧಕ ತಿಪ್ಪೇಸ್ವಾಮಿ ಬಿ ಮಾತನಾಡಿದರು. ಸಂಶೋಧನಾರ್ಥಿಗಳಾದ ಭೋಜ ರಾಜ ಆರ್. ಪ್ರಾಸ್ತಾವಿಕ ಮಾತನಾಡಿದರು. ಜ್ಯೋತಿ ತಿಪ್ಪೇಸ್ವಾಮಿ ಯವರು ನಿರ್ವಹಿಸಿದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 32 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC

## ಕನ್ನಡ ವ್ಯಾಕರಣ – ಪ್ರಥಮ ಭಾಷೆ ಕನ್ನಡ

**1. ನಾಮ ವಾಚಕಗಳು ಎಂದರೇನು ?**

**ಉತ್ತರ–** ವ್ಯಕ್ತಿ, ಪ್ರಾಣಿ, ಗಿಡ ಮರ ಮತ್ತು ವಸ್ತುಗಳನ್ನು ಗುರುತಿಸುವ, ಅವುಗಳ ಗುಣ ಸ್ವಭಾವಗಳನ್ನು ಹೇಳುವ ಹಾಗೂ ಕಾಲ, ಸ್ಥಾನ, ಅಳತೆ, ತೂಕ, ಸಂಖ್ಯೆಗಳನ್ನು ಸೂಚಿಸುವ ವ್ಯವಹಾರದ ಹೆಸರುಗಳನ್ನು' ನಾಮ ವಾಚಕಗಳು' ಎನ್ನುವರು.

**2. ನಾಮ ವಾಚಗಳಲ್ಲಿ ಎಷ್ಟು ವಿಧಗಳಿವೆ? ಅವು ಯಾವುವು ?**

**ಉತ್ತರ–** ನಾಮ ವಾಚಕಗಳಲ್ಲಿ ಎಂಟು ವಿಧಗಳಿವೆ. ಅವು ಯಾವುವೆಂದರೆ 1. ವಸ್ತುವಾಚಕಗಳು 2. ಗುಣವಾಚಕ 3. ಸಂಖ್ಯಾ ವಾಚಕ 4. ಪರಿಮಾಣ ವಾಚಕ 5. ಪ್ರಕಾರವಾಚಕ 6. ದಿಗ್ವಾಚಕಗಳು 7. ಭಾವನಾಮಗಳು 8. ಸರ್ವನಾಮಗಳು.

**3. ವಸ್ತು ವಾಚಕಗಳು ಎಂದರೇನು ?**

**ಉತ್ತರ–** ವಸ್ತುಗಳ ಹೆಸರನ್ನು ಸೂಚಿಸುವ ನಾಮ ಪ್ರಕೃತಿಗಳನ್ನು' ವಸ್ತು ವಾಚಕ 'ಎನ್ನುವರು.

**4. ವಸ್ತುವಾಚಗಳಲ್ಲಿ ಎಷ್ಟು ವಿಧ? ಅವು ಯಾವುವು?**

ಉತ್ತರ– ವಸ್ತು ವಾಚಕಗಳಲ್ಲಿ ಮೂರು ವಿಧ 1. ಅಂಕಿತನಾಮ 2. ರೂಢನಾಮ 3. ಅನ್ವರ್ಥಕ ನಾಮ.

**5. ಅಂಕಿತನಾಮ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ–** ಪ್ರತ್ಯೇಕ ವ್ಯವಹಾರಕ್ಕಾಗಿ ಕರೆಯುವ ಹೆಸರುಗಳನ್ನು ಅಂಕಿತನಾಮ ಎನ್ನುವರು. ಉದಾಹರಣೆ–ಗೀತಾಂಜಲಿ, ದರ್ಶನ್, ಸಹದೇವ, ದುರ್ಯೋಧನ ಇತ್ಯಾದಿ.

**6. ರೂಢನಾಮ ಎಂದರೇನು? ಉದಾಹರಣೆ ಕೊಡಿ.**

**ಉತ್ತರ–** ರೂಢಿಯಿಂದ ಹೇಳಿಕೊಂಡು ಬಂದ ಹೆಸರುಗಳನ್ನು ರೂಢನಾಮ ಎನ್ನುವರು.

**ಉದಾಹರಣೆ–** ನದಿ, ಪರ್ವತ, ಊರು, ಮನುಷ್ಯ, ದೇಶ ಇತ್ಯಾದಿ.

**7. ಅನ್ವರ್ಥನಾಮ ಎಂದರೇನು? ಉದಾಹರಣೆ ಕೊಡಿ.**

**ಉತ್ತರ–** ವ್ಯಕ್ತಿಯ ಗುಣ ಸ್ವಭಾವ ವಿಶೇಷವಾದ ಅರ್ಥಗಳನ್ನು ತಿಳಿಸುವ ಹೆಸರುಗಳನ್ನು' ಅನ್ವರ್ಥ ನಾಮ' ಎನ್ನುವರು.

**ಉದಾಹರಣೆ–** ವ್ಯಾಪಾರಿ, ವಿದ್ವಾಂಸ, ವಿಜ್ಞಾನಿ, ಪೂಜಾರಿ ಇತ್ಯಾದಿ.

**8. ಗುಣವಾಚಕ ಎಂದರೇನು? ಉದಾಹರಣೆ ಕೊಡಿ.**

**ಉತ್ತರ–** ನಾಮ ವಾಚಗಳ ಗುಣಲಕ್ಷಣಗಳನ್ನು ವರ್ಣಿಸುವ ಪದಗಳನ್ನು ಗುಣವಾಚಕ ಎನ್ನುವರು.

**ಉದಾಹರಣೆ–** ಒಳ್ಳೆಯ, ಕೆಟ್ಟ, ದೊಡ್ಡದು, ಹಳತು ಇತ್ಯಾದಿ.

**9. ಸಂಖ್ಯಾ ವಾಚಕ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ–** ಸಂಖ್ಯೆಯನ್ನು ಸೂಚಿಸುವ ಪದಗಳನ್ನು ಸಂಖ್ಯಾ ವಾಚಕ ಎನ್ನುವರು. **ಉದಾಹರಣೆ–** ಹನ್ನೆರಡು, ಇಪ್ಪತ್ತು, ಮೂವತ್ತು ಇತ್ಯಾದಿ.

**10. ಸಂಖ್ಯೇಯ ವಾಚಕ ಎಂದರೇನು? ಉದಾಹರಣೆ ಕೊಡಿ.**

**ಉತ್ತರ–** ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಪದಗಳನ್ನು ಸಂಖ್ಯೇಯ ವಾಚಕಗಳು ಎನ್ನುವರು.

**ಉದಾಹರಣೆ–** ಹನ್ನೆರಡನೆಯ, ಎಂಬತ್ತನೆಯ, ಮೂವರು ಇತ್ಯಾದಿ.

**11. ಪರಿಮಾಣ ವಾಚಕ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ–** ಪ್ರಮಾಣವನ್ನು ಸೂಚಿಸುವ ಪದಗಳನ್ನು ಪರಿಮಾಣ ವಾಚಕ ಎನ್ನುವರು.

**ಉದಾಹರಣೆ–** ಅಷ್ಟು, ಇಷ್ಟು, ಎಷ್ಟು, ಹಲವು, ಕೆಲವು, ಅನಿತು, ಏನಿದು ಇತ್ಯಾದಿ.

**12. ಪ್ರಕಾರವಾಚಕ ಎಂದರೇನು? ಉದಾಹರಣೆ ಕೊಡಿ.**

**ಉತ್ತರ–** ರೀತಿಯನ್ನು ಸೂಚಿಸುವ ಪದಗಳನ್ನು ಪ್ರಕಾರವಾಚಕ ಎನ್ನುವರು.

**ಉದಾಹರಣೆ–** ಇಂತಹ, ಎಂತಹದು, ಹಾಗೆ, ಹೀಗೆ, ಹೇಗೆ ಇತ್ಯಾದಿ.

**13. ದಿಗ್ವಾಚಕಗಳು ಎಂದರೇನು ?ಉದಾಹರಣೆ ಕೊಡಿ.**

**ಉತ್ತರ–** ದಿಕ್ಕುಗಳನ್ನು ಸೂಚಿಸುವ ಪದಗಳನ್ನು ದಿಗ್ವಾಚಕಗಳು ಎನ್ನುವರು.

**ಉದಾಹರಣೆ–** ಮೂಡಣ, ತೆಂಕಣ, ಪಡುವಣ, ಈಶಾನ್ಯ, ಆಗ್ನೇಯ,ಪೂರ್ವ, ಮೇಲೆ, ಕೆಳಗೆ ಇತ್ಯಾದಿ.

**14. ಭಾವನಾಮಗಳು ಎಂದರೇನು? ಉದಾಹರಣೆ ಕೊಡಿ.**

**ಉತ್ತರ–** ಒಂದು ವಸ್ತುವಿನ ಗುಣ ಸ್ವಭಾವಗಳನ್ನು ತಿಳಿಸುವ ನಾಮ ವಾಚಕಗಳನ್ನು 'ಭಾವನಾಮಗಳು' ಎನ್ನುವರು.

**ಉದಾಹರಣೆ–** ಕೆಂಪು, ಹಿರಿಮೆ, ಬಿಳಿಪು, ಬಡತನ, ಸಿರಿತನ ಇತ್ಯಾದಿ.

**15. ಸರ್ವನಾಮಗಳು ಎಂದರೇನು ?**

**ಉತ್ತರ–** ನಾಮಪದಗಳ ಸ್ಥಾನದಲ್ಲಿ ಅವುಗಳ ಪ್ರತಿನಿಧಿಯಾಗಿ ಬಳಸುವ ಪದಗಳನ್ನು' ಸರ್ವನಾಮಗಳು' ಎನ್ನುವರು.

**16. ಸರ್ವನಾಮಗಳಲ್ಲಿ ಎಷ್ಟು ವಿಧಗಳಿವೆ ? ಅವು ಯಾವುವು ?**

**ಉತ್ತರ–** ಸರ್ವನಾಮಗಳಲ್ಲಿ ನಾಲ್ಕು ವಿಧಗಳಿವೆ.

1. ಪುರುಷಾರ್ಥಕ ಸರ್ವನಾಮಗಳು 2. ಆತ್ಮಾರ್ಥಕ ಸರ್ವನಾಮಗಳು 3. ಪ್ರಶ್ನಾರ್ಥಕ ಸರ್ವನಾಮಗಳು 4. ನಿರ್ದೇಶನಾತ್ಮಕ ಸರ್ವನಾಮಗಳು.

**17. ಪುರುಷಾರ್ಥಕ ಸರ್ವನಾಮಗಳು ಯಾವುವು ? ಉದಾಹರಣೆ ಕೊಡಿ.**

**ಉತ್ತರ–** 1. ಉತ್ತಮ ಪುರುಷ ಸರ್ವನಾಮ – ನಾನು, ನಾವು.
2. ಮಧ್ಯಮ ಪುರುಷ ಸರ್ವನಾಮ– ನೀನು, ನೀವು.
3. ಪ್ರಥಮ ಪುರುಷ ಸರ್ವನಾಮ– ಅವನು, ಇವನು, ಇವಳು, ಅವಳು, ಅದು, ಇದು, ಅವರು, ಇವರು, ಅವು, ಇವು.

**18. ಆತ್ಮಾರ್ಥಕ ಸರ್ವನಾಮಗಳು ಎಂದರೇನು ? ಉದಾಹರಣೆ ಕೊಡಿ.**

**ಉತ್ತರ–** ವ್ಯಕ್ತಿ ಅಥವಾ ವಸ್ತುವಿನ ಸ್ವಂತಕ್ಕೆ ಅನ್ವಯಿಸಬಹುದಾದ ಪ್ರಥಮ ಪುರುಷ ಸರ್ವನಾಮ ಪದಗಳನ್ನು ಆತ್ಮಾರ್ಥಕ ಸರ್ವನಾಮಗಳು ಎನ್ನುವರು.

**ಉದಾಹರಣೆ–** ತಾನು, ತನ್ನ, ತಾವು, ತಮ್ಮ.

**19. ಪ್ರಶ್ನಾರ್ಥಕ ಸರ್ವನಾಮಗಳು ಎಂದರೇನು ? ಉದಾಹರಣೆ ಕೊಡಿ.**

**ಉತ್ತರ–** ವ್ಯಕ್ತಿ, ವಸ್ತುಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳುವಾಗ ಬಳಸುವ ಪದಗಳನ್ನು'ಪ್ರಶ್ನಾರ್ಥಕ ಸರ್ವನಾಮಗಳು' ಎನ್ನುವರು.

**ಉದಾಹರಣೆ–** ಯಾರು, ಏನು, ಯಾವುದು, ಯಾವನು, ಯಾವಳು, ಯಾವುವು ಇತ್ಯಾದಿ.

**20. ನಿರ್ದೇಶಾತ್ಮಕ ಸರ್ವನಾಮಗಳು ಎಂದರೇನು? ಉದಾಹರಣೆ ಕೊಡಿ.**

**ಉತ್ತರ–** ವ್ಯಕ್ತಿ ,ವಸ್ತುಗಳಿಗೆ ಸಂಬಂಧಪಟ್ಟಂತೆ ನಿರ್ದೇಶನ ನೀಡಲು ಬಳಸುವ ಪದಗಳನ್ನು' ನಿರ್ದೇಶಾತ್ಮಕ ಸರ್ವನಾಮಗಳು' ಎನ್ನುವರು.

**ಉದಾಹರಣೆ–**ಆ,ಈ, ಆತ, ಆಕೆ, ಈತ, ಈಕೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ (ತಾ)


ಸಾಯಿಮಣಿ ಪ್ರಕಾಶನ, ಹೊಸಪೇಟೆ

## ಸ್ಟುಡೆಂಟ್ ಕಾಲಂ

# ಸರ್ಕಾರದ ಸೌಲಭ್ಯಗಳಿರುವುದು ನಮ್ಮ ಆರೋಗ್ಯಕ್ಕಾಗಿ



ಅಂದು ಕೊನೆಯ ಅವಧಿಯಲ್ಲಿ ಗೆಳತಿಯ ರೊಂದಿಗೆ ಕಣ್ಣಾಮುಚ್ಚಾಲೆ ಆಟವಾಡುತ್ತಿದ್ದೆ. ಹೀಗೆ ಆಟುವಾಗ ನಾಲ್ಕಾರು ಗೆಳತಿಯರು ಕ್ಲಾಸ್ ರೂಮಿನ ಹಿಂದೆ ಅವಿತುಕೊಂಡಿದ್ದೆವು. ಅವಿತುಕೊಂಡಾಗ ಕಿಟಕಿ ಪಕ್ಕದಲ್ಲಿ ನಾಲ್ಕಾರು ಮಾತ್ರೆಗಳು ಕಣ್ಣಿಗೆ ಬಿದ್ದವು. ಆರಿಸಿಕೊಂಡು ನೋಡಿದೆ. ಅವು ವಾರಕ್ಕೊಮ್ಮೆ ನಮಗೆ ನೀಡುವ ಕಬ್ಬಿಣಾಂಶದ ಮಾತ್ರೆಗಳಾಗಿದ್ದವು. ಅವುಗಳನ್ನು ಕೈಯಲ್ಲಿ ಹಿಡಿದುಕೊಂಡು ಆಫೀಸ್ ರೂಮಿಗೆ ಹೋದೆ. ದೈಹಿಕ ಶಿಕ್ಷಕರಿಗೆ ಮಾತ್ರೆಗಳನ್ನು ತೋರಿಸಿ, 'ಸರ್, ಇವು ತರಗತಿಯ ಕಿಟಕಿ ಬಳಿ ಸಿಕ್ಕವು' ಎಂದೆ. ಶಿಕ್ಷಕರಿಗೆ ಆಶ್ಚರ್ಯವಾಯಿತು. ಅವರೂ ನಮ್ಮ ಜೊತೆ ಬಂದರು. ಕಿಟಕಿ ಬಳಿ ಹುಡುಕಿದೆವು. ಪುನಃ ನಾಲ್ಕಾರು ಮಾತ್ರೆಗಳು ದೊರೆತವು. ಕೂಡಲೇ ಶಿಕ್ಷಕರು ವಿಷಲ್ ಹಾಕಿ ಆ ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಒಳಗೆ ಕರೆದರು. ಕಿಟಕಿಯ ಬಳಿ ಕೂರುತ್ತಿದ್ದ ವಿದ್ಯಾರ್ಥಿಗಳನ್ನು ವಿಚಾರಿಸಿದರು. ಅದರಲ್ಲಿ ಒಬ್ಬ ವಿದ್ಯಾರ್ಥಿ ಮಾತ್ರೆಗಳನ್ನು ತಾನೇ ಹೊರಹಾಕಿದ್ದಾಗಿ ಒಪ್ಪಿಕೊಂಡ. ಶಿಕ್ಷಕರು ಕಾರಣ ಕೇಳಿದಾಗ ಅವರು ಬೇರೆಕಾರಣಗಳಿಗಾಗಿನಿತ್ಯವೂಬೇರೆಮಾತ್ರೆಗಳನ್ನುತೆಗೆದುಕೊಳ್ಳುವುದರಿಂದ ಶಾಲೆಯಲ್ಲಿ ನೀಡಿದ ಮಾತ್ರೆ ನುಂಗುತ್ತಿಲ್ಲ ಎಂದು ತಿಳಿಸಿದ. ನಂತರ ಶಿಕ್ಷಕರು ಮಾತ್ರೆಗಳ ಮಹತ್ವವನ್ನು ತಿಳಿಸಿ ಎಲ್ಲರೂ ಕಡ್ಡಾಯವಾಗಿ ಶಾಲೆಯಲ್ಲಿ ನೀಡಿದ ಮಾತ್ರೆ ನುಂಗುವಂತೆ ಪ್ರೇರೇಪಿಸಿದರು.

ಅಂದು ಶಾಲೆ ಮುಗಿಸಿಕೊಂಡು ಮನೆಗೆ ಹೋದರೂ ಅದೇ ವಿಷಯ ತಲೆಯಲ್ಲಿ ಗಿರಕಿಹೊಡೆಯುತ್ತಿತ್ತು. ನಮ್ಮ ಆರೋಗ್ಯಕ್ಕಾಗಿ ಸರಕಾರ ಎಷ್ಟೊಂದು ಖರ್ಚುಮಾಡುತ್ತಿದೆಯಲ್ಲ ಎನಿಸಿತು. ವರ್ಷಕ್ಕೆ ಒಂದೆರಡು ಬಾರಿ ವೈದ್ಯಕೀಯ ತಪಾಸಣೆ, ವಾರಕ್ಕೊಮ್ಮೆ ಕಬ್ಬಿಣಾಂಶದ ಮಾತ್ರೆ, ವರ್ಷಕ್ಕೆ ಎರಡು ಬಾರಿ ಜಂತು ನಿವಾರಣಾ ಮಾತ್ರೆ, ದೃಷ್ಟಿ ದೋಷ ತಪಾಸಣೆ, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ನಮಗಾಗಿ ಮಾಡುತ್ತಿರುವಾಗ ನಾವೇಕೆ ನಮ್ಮ ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿಲ್ಲ ಎನಿಸಿತು.

ನಿತ್ಯವೂ ಶಾಲೆಯಲ್ಲಿ ನೀಡುವ ರಾಗಿ ಮಾಲ್ಟ್, ಹಾಲು, ಬಿಸಿಯೂಟ, ಮೊಟ್ಟೆ/ಬಾಳೆಹಣ್ಣು, ಇವೆಲ್ಲವೂ ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಯೋಜನೆಗಳಾಗಿವೆ. ಜೊತೆಗೆ ಬಾಲಕಿಯರಿಗೆ ನೀಡುವ ಶುಚಿ ಪ್ಯಾಡ್‌ಗಳು ಸಹ ನಮ್ಮ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಅಂಶಗಳಾಗಿವೆ. ಅದೆಷ್ಟೋ ವಿದ್ಯಾರ್ಥಿಗಳು ಬಿಸಿಯೂಟದಲ್ಲಿನ ತರಕಾರಿ, ಸೊಪ್ಪುಗಳನ್ನು ತಟ್ಟೆಯ ಪಕ್ಕಕ್ಕೆ ಸರಿಸಿ ಊಟ ಮಾಡುವುದನ್ನು ಗಮನಿಸಿದ್ದೇನೆ. ಇದೆಲ್ಲವೂ ನಮ್ಮ ಆರೋಗ್ಯಕ್ಕೆ ಅಗತ್ಯವಲ್ಲವೇ. ತರಕಾರಿ ಮತ್ತು ಸೊಪ್ಪುಗಳು ನಮಗೆ ಹೆಚ್ಚು ವಿಟಮಿನ್ ನೀಡುವ ಆಹಾರ ಸಾಮಗ್ರಿಗಳಾಗಿವೆ. ಅಂತೆಯೇ ಬೇಳೆಯಿಂದ ಪ್ರೋಟೀನ್ ಸಿಗುತ್ತದೆ. ಅಕ್ಕಿಯಿಂದ ಯಥೇಚ್ಛವಾದ ಕಾರ್ಬೋಹೈಡ್ರೇಟ್ಸ್ ಸಿಗುತ್ತದೆ. ಇವೆಲ್ಲವೂ ನಮ್ಮ ಆರೋಗ್ಯವನ್ನು ಉತ್ತಮ ಪಡಿಸುವಲ್ಲಿ ಮಹತ್ವದ ಅಂಶಗಳು ಅಲ್ಲವೇ? ಉಚಿತವಾಗಿ ದೊರೆಯುವ ಇವುಗಳನ್ನು ಸೇವಿಸಿ ನಮ್ಮ ಆರೋಗ್ಯವನ್ನು ನಾವೇ ಕಾಪಾಡಿಕೊಳ್ಳದಿದ್ದರೆ ಹೇಗೆ? ಶಿಕ್ಷಕರು ಉತ್ತಮ ಆರೋಗ್ಯ ಅಭ್ಯಾಸಗಳ ಬಗ್ಗೆ ಹೇಳಬಹುದು ಅಷ್ಟೆ. ಆದರೆ ಅದನ್ನು ನಾವು ಪರಿಪಾಲಿಸಿದರೆ ಮಾತ್ರ ನಮ್ಮ ಆರೋಗ್ಯವನ್ನು ಚೆನ್ನಾಗಿ ಕಾಡಿಕೊಳ್ಳಬಹುದು ಅಲ್ಲವೇ? ಸರ್ಕಾರದಿಂದ ಬರುವ ಆರೋಗ್ಯದ ಸೌಲಭ್ಯಗಳನ್ನು ದುರುಪಯೋಗ ಮಾಡಿಕೊಳ್ಳದೇ ಸರಿಯಾಗಿ ಬಳಸಿಕೊಳ್ಳುವ ಮೂಲಕ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳೋಣವೇ?

– ಎ.ಸೃಷ್ಟಿ. 9ನೇ ತರಗತಿ.
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹಗರಿಬೊಮ್ಮನಹಳ್ಳಿ(ತಾ) ವಿಜಯನಗರ(ಜಿ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಇಂದು ವಿಶ್ವದ ಶ್ರೇಷ್ಠ ಕವಿ – ವಿಮರ್ಶಕ ಎಂ. ಗೋಪಾಲಕೃಷ್ಣ ಅಡಿಗರ ಜನ್ಮದಿನ

# ಹೊಸ ಕಾವ್ಯ ಮಾರ್ಗ ಜನಕ ಎಂ.ಜಿ.ಅಡಿಗರ

ಆಧುನಿಕ ಸಂದರ್ಭದಲ್ಲಿ ಕನ್ನಡ ನವ್ಯಕಾವ್ಯದ ಪ್ರವರ್ತಕರೆನಿಸಿದ ಕನ್ನಡದ, ಭಾರತದ, ಅಷ್ಟೇಕೆ ವಿಶ್ವದ ಶ್ರೇಷ್ಠ ಕವಿ ಮತ್ತು ವಿಮರ್ಶಕ ಎಂ. ಗೋಪಾಲಕೃಷ್ಣ ಅಡಿಗರ ಜನ್ಮದಿನವಿಂದು. ಇಂಗ್ಲೀಷ್ ನೊಬೆಲ್ ಪುರಸ್ಕೃತ ಕವಿಗಳಾದ ಡಬ್ಲ್ಯೂ.ಬಿ. ಯೇಟ್ಸ್, ಟಿ.ಎಸ್. ಎಲಿಯಟ್ ಅವರಿಗೆ ಸರಿದೊರೆಯಾದವರು, ಸರಿ ಮಿಗಿಲೆನಿಸಿದವರು.

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿ ಗ್ರಾಮದಲ್ಲಿ 18 ಫೆಬ್ರವರಿ 1918 ರಂದು ಅಡಿಗರು ಜನಿಸಿದರು. ತಂದೆ ರಾಮಪ್ಪ ಅಡಿಗ ಮತ್ತು ತಾಯಿ ಗೌರಮ್ಮ. ಅರ್ಚಕ ಮನೆತನಕ್ಕೆ ಸೇರಿದ ಅಡಿಗರಿಗೆ ಸುಸಂಸ್ಕೃತ ವಾತಾವರಣ ಎಳವೆಯಲ್ಲೇ ದೊರೆತಿತ್ತು . ಚಿಕ್ಕಂದಿ ಚಿಕ್ಕಂದಿನಲ್ಲಿ ನೋಡುತ್ತಿದ್ದ ಯಕ್ಷಗಾನ ಪ್ರಸಂಗಗಳು ಅವರ ಮೇಲೆ ಪ್ರಭಾವ ಬೀರಿದ್ದು ಈ ಹಿನ್ನೆಲೆಯಲ್ಲಿ ತಮ್ಮ ಹದಿಮೂರನೆಯ ವಯಸ್ಸಿನಲ್ಲೇ ಭಾಮಿನಿ ಷಟ್ಪದಿ, ಕಂದಪದ್ಯ, ವಾರ್ಧಕ ಷಟ್ಪದಿಗಳಲ್ಲಿ ಪದ್ಯ ರಚನೆ ಮಾಡಿದುದಾಗಿ ಸ್ವತಃ ಅಡಿಗರೇ ಹೇಳಿಕೊಂಡಿದ್ದಾರೆ.

ಪ್ರಾಥಮಿಕ ಹಾಗೂ ಹೈಸ್ಕೂಲ್ ಶಿಕ್ಷಣವನ್ನು ಬೈಂದೂರು, ಕುಂದಾಪುರಗಳಲ್ಲಿ ಪೂರೈಸಿದ ಅಡಿಗರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಟರ್ಮೀಡಿಯಟ್, ನಂತರ ಬಿ.ಎ. ಆನರ್ಸ್ ಪದವಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದರು.

ತುಮಕೂರು, ಬೆಂಗಳೂರು, ದಾವಣಗೆರೆ ಚಿತ್ರದುರ್ಗಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ನಿರ್ವಹಿಸಿದರಲ್ಲದೇ ಮೈಸೂರಿನ ಶಾರದಾ ವಿಳಾಸ ಕಾಲೇಜು, ಸೆಂಟ್ ಫಿಲೋಮಿನಾ ಕಾಲೇಜುಗಳಲ್ಲಿಯೂ ಅಧ್ಯಾಪಕರಾಗಿ, ನಂತರ ಉಡುಪಿಯ ಪೂರ್ಣಪ್ರಜ್ಞಾ ಕಾಲೇಜು, ಸಾಗರದ ಲಾಲ್ ಬಹಾದ್ದೂರ್ ಶಾಸ್ತ್ರಿ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡಿದರು. ಬೆಂಗಳೂರಿನ ಅಠಾರ ಕಚೇರಿಯ ಗುಮಾಸ್ತೇಯಾಗಿಯೂ ಕೆಲವು ಕಾಲ ಕೆಲಸ ಮಾಡಿದರಲ್ಲದೆ, ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್ ನ ಉಪ ನಿರ್ದೇಶಕರಾಗಿಯೂ ದುಡಿದಿದ್ದಾರೆ. ಗೆಳೆಯರ ಒತ್ತಾಯಕ್ಕೆ ಮಣಿದು ಲೋಕಸಭಾ ಚುನಾವಣೆಯಲ್ಲಿ ಜನಸಂಘದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಿತರಾದರು.

ಅಡಿಗರು ಕಾವ್ಯ, ವಿಮರ್ಶೆ, ಸಣ್ಣಕಥೆ, ವೈಚಾರಿಕ ಕುರಿತ ಹಲವು ಲೇಖನಗಳು, ಆತ್ಮಕಥೆ– ಹೀಗೆ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಭಾವತರಂಗ (1946) ಕಟ್ಟುವೆವು ನಾವು, ನಡೆದು ಬಂದ ದಾರಿ, ಚಂಡಮದಳೆ, ಭೂಮಿಗೀತ, ವರ್ಧಮಾನ, ಇದನ್ನು ಬಯಸಿರಲಿಲ್ಲ, ಮೂಲಕ ಮಹಾಶಯರು, ಬತ್ತಲಾರದ ಗಂಗೆ, ಚಿಂತಾಮಣಿಯಲ್ಲಿ ಕಂಡ ಮುಖ, ಸುವರ್ಣ ಪುತ್ತಳಿ, ಬಾ ಇತ್ತ ಇತ್ತ, ಮಾವೋ ಕವನಗಳು –ಇವು ಅವರ ಕವನ ಸಂಕಲನಗಳು. ಅನಾಥೆ, ಆಕಾಶ ದೀಪ – ಕಾದಂಬರಿಗಳು. 'ನೆನಪಿನ ಗಣಿಯಿಂದ' ಆತ್ಮಕಥೆ. ಅಡಿಗರ ಸಮಗ್ರ ಕಾವ್ಯ ಮತ್ತು ಸಮಗ್ರ ಗದ್ಯಗಳು ಪ್ರಕಟವಾಗಿವೆ.



ಡಾ.ಬಿ.ಜಿ. ಕನಕೇಶಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು.
Scan For Digital Colourful
HAMPI TIMES E-paper

ಅಡಿಗರು ಕಾವ್ಯಸೃಷ್ಟಿಯ ಜೊತೆಗೆ ಕನ್ನಡದಲ್ಲಿ ಹೊಸ ವಿಮರ್ಶಾ ವಿಧಾನವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. "ಸಾಕ್ಷಿ" ಎಂಬ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿ ಹೊಸ ಲೇಖಕರಿಗೆ, ಹೊಸ ಚಿಂತನೆಗಳಿಗೆ, ಹೊಸ ವಿಮರ್ಶೆಗೆ ಪ್ರೋತ್ಸಾಹ ನೀಡಿದ್ದಾರೆ. ಕಾವ್ಯಲೋಕದ ಶಿಖರವಾಗಿದ್ದ ಅಡಿಗರು ಯು. ಆರ್.ಅನಂತ ಮೂರ್ತಿ, ಎ.ಕೆ. ರಾಮಾನುಜನ್, ಬಿ. ಸಿ. ರಾಮಚಂದ್ರ ಶರ್ಮ,



ಸುಮತಿಂದ್ರನಾಡಿಗ, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಹೆಚ್.ಎಂ. ಚನ್ನಯ್ಯ, ಚಂದ್ರಶೇಖರ ಪಾಟೀಲ ಮೊದಲಾದವರು ಸಾಹಿತ್ಯ ರಚನೆಯಲ್ಲಿ ಗಾಢವಾಗಿ ನವ್ಯ ಪ್ರಜ್ಞೆಯನ್ನು ರೂಢಿಸಿಕೊಳ್ಳುವಲ್ಲಿ ಪ್ರೇರಣೆಯಾಗಿದ್ದಾರೆ. ಉತ್ತಮ ಬರಹಗಾರರೆನಿಸಿದಲ್ಲಿ ಕಿರಿಯರಿಂದಲೂ ಮುನ್ನುಡಿ ಬರೆಸಿದ್ದಾರೆ.

ಅಡಿಗರಿಗೆ ದೊರೆತ ಪ್ರಶಸ್ತಿಗಳು ಹಲವು. 1974ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1975ರಲ್ಲಿ 'ವರ್ಧಮಾನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1979ರಲ್ಲಿ ಕೇರಳದ ಕುಮಾರ್ ಆಶಾನ್ ಸಮ್ಮಾನ್, 1980ರಲ್ಲಿ ಸಮಗ್ರ ಕಾವ್ಯಕ್ಕೆ ಮೂಡಬಿದರೆಯ ವರ್ಧಮಾನ ಪ್ರಶಸ್ತಿ, 1985ರಲ್ಲಿ ಮಧ್ಯಪ್ರದೇಶ ಸರಕಾರ ಪ್ರಥಮವಾಗಿ ಕೊಡಮಾಡಿದ ಕಬೀರ್ ಸಮ್ಮಾನ್ ಪ್ರಶಸ್ತಿ, ರಾಜ್ಯೋತ್ಸವ ಪುರಸ್ಕಾರ, 1983 ರಲ್ಲಿ ಮರಣೋತ್ತರವಾಗಿ ಪಂಪ ಪ್ರಶಸ್ತಿಗಳು ಲಭಿಸಿವೆ. 1979ರಲ್ಲಿ ಧರ್ಮಸ್ಥಳದಲ್ಲಿ ಜರುಗಿದ 51ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. 14 ನವಂಬರ್ 1992 ರಂದು ಬೆಂಗಳೂರಿನಲ್ಲಿ ವಿಧಿವಶರಾದರು.

ವರಕವಿ ದ.ರಾ.ಬೇಂದ್ರೆ ಅವರ ತರುವಾಯ ಅಷ್ಟೇ ಸಾಮರ್ಥ್ಯವುಳ್ಳ ಪ್ರತಿಭಾವಂತ ಕವಿ ಎಂದರೆ ಅಡಿಗರೇ. ನವೋದಯ ಕಾವ್ಯಮಾರ್ಗದಲ್ಲಿ ಕಾವ್ಯ ಬರೆಯಲು ಪ್ರಾರಂಭ ಮಾಡಿದರೂ ಅದರಿಂದ ಭಿನ್ನವಾಗಿ ಹೊಸ ಕಾವ್ಯ ಮಾರ್ಗವನ್ನು, ಸಾಹಿತ್ಯ ಭೂಮಿಕೆಯನ್ನು ಹುಟ್ಟು ಹಾಕಿದರು. ನವೋದಯದ ಜಡ್ಡುಗಟ್ಟಿದ ಸ್ಥಿತಿಗೆ ಹೊಸತನವನ್ನು ತರಬೇಕೆಂಬ ತುಡಿತ ಮೊದಲ ಸಂಗ್ರಹ ಭಾವತರಂಗದ ಮೊದಲ ಕವಿತೆ 'ನನ್ನನುಡಿ'ಯಲ್ಲೇ ಅಭಿವ್ಯಕ್ತಗೊಂಡಿದೆ.

**"ಅನ್ಯರೊರೆದುದನೆ ಬರೆದುದನೆ ನಾ ಬರೆಬರೆದು,**
**ಬಿನ್ನಗಾಗಿದೆ ಮನವು ಬಗೆಯೊಳಗನೇ ತೆರೆದು,**
**ನನ್ನ ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ**
**ಪನ್ನತಿಕೆ ಬರುವನಕ ನನ್ನ ಬಾಳಿದು ನರಕ"–**

ಎಂಬಲ್ಲಿ ತನ್ನತನವನ್ನು ಕಂಡುಕೊಳ್ಳುವುದರ ಮುನ್ಸೂಚನೆಯನ್ನು ಕಾಣುತ್ತೇವೆ.

ಭಾವಗೀತೆಯ ಸತ್ವ, ಚಿಂತನ ಪರತೆ, ನಾಟಕೀಯ ಗುಣಗಳಿಂದ ಮೂಲಭೂತ ಪ್ರತಿಮೆಗಳ ಮೂಲಕ ಬದುಕಿನ ನೆಲೆಗಳನ್ನು ಗುರುತಿಸುವುದು ಅಡಿಗರ ಕಾವ್ಯ ವೈಶಿಷ್ಟ್ಯ. ಅಂತೆಯೇ ಕಾವ್ಯದಲ್ಲಿ ವಾಸ್ತವವಾದವನ್ನು ತಂದ ಹಾಗೆ ವಿಮರ್ಶೆಯಲ್ಲೂ ಕೃತಿನಿಷ್ಠ ಪ್ರಾಯೋಗಿಕ ವಿಮರ್ಶೆಯನ್ನು ತಂದರು. 'ಮಣ್ಣಿನ ವಾಸನೆ' ಅಡಿಗರು ಹೊಚ್ಚ ಹೊಸದಾಗಿ ಬಳಕೆಗೆ ತಂದ ಪಾರಿಭಾಷಿಕ. ಅಡಿಗರ ಮೊದಲ ಕವನ ಸಂಕಲನ 'ಭಾವತರಂಗ'ದಲ್ಲಿ ಕವಿಯ ಮನಸ್ಸು ಸ್ವಯಂದೀಪಕತೆಗೆ ತುಡಿದರೆ, ಎರಡನೇ ಸಂಗ್ರಹ 'ಕಟ್ಟುವೆವು ನಾವು' ಅಲ್ಲಿ ಹೊಸ ಹುರುಪಿನ ಪ್ರಗತಿಶೀಲ ಚಿಂತನೆಯ ದಾರಿಯನ್ನು ಗುರುತಿಸಬಹುದು. 1952 ರಲ್ಲಿ ಬಂದ 'ನಡೆದು ಬಂದ ದಾರಿ'ಯಲ್ಲಿ ಅಡಿಗರು ರಮ್ಯಾ ಮಾರ್ಗವನ್ನು ಬಿಟ್ಟು ಹೊಸ ರೀತಿಯ ನವ್ಯಕಾವ್ಯ ಮಾರ್ಗವನ್ನು ಬರೆಯಲು ಪ್ರಾರಂಭಿಸಿದರು.

ಅಡಿಗರ ಕಾವ್ಯ ಅರ್ಥವಾಗುವುದಿಲ್ಲ ಎಂಬ ಮಾತಿದೆ. 'ಅರ್ಥವಾಗುವ ಹಾಗೆ ಅಲ್ಲ, ಅರ್ಥವಿರುವ ಹಾಗೆ ಬರೆಯಬೇಕು' ಎನ್ನುತ್ತಾರೆ. ಅಡಿಗರ ಕವಿತೆಗಳು ಒಂದೇ ಕುಳಿತಕ್ಕೆ ರಚನೆಯಾದವಲ್ಲ. ಕವಿತೆ ಆರಂಭವಾಗಿ ಪೂರ್ಣಗೊಳ್ಳುವುದಕ್ಕೆ ಹಲವು ವರ್ಷಗಳೇ ತೆಗೆದುಕೊಂಡಿವೆ. ಅಡಿಗರ ಕಾವ್ಯಗಳು ರಂಜಿಸುವ, ಅಮಲು ತರಿಸುವ, ಕಾವ್ಯಗಳಲ್ಲ. ಓದುಗರ ಮನಸ್ಸನ್ನು ಕೆಣಕುವ, ಕಾಡುವ, ಸವಾಲು ಹಾಕುವ, ಚಿಂತನೆಗೆ ಹಚ್ಚುವ ಕಾವ್ಯ. ಹಾಗಾಗಿ ಓದುವವರಿಗೂ ತಕ್ಕ ತಯಾರಿ ಅವಶ್ಯ. "ಹುತ್ತಗಟ್ಟದೇ ಚಿತ್ತ ಕೆತ್ತೀತೆ ಆ ಅಂಥ ಪುರುಷೋತ್ತಮನ"?

ನಮ್ಮ ಕಾಲದ ಶ್ರೇಷ್ಠ ರಾಜಕೀಯ ಪ್ರಜ್ಞೆಯ ಕವಿಯಾದ ಅಡಿಗರು ಪರಂಪರೆ ಮತ್ತು ವರ್ತಮಾನಗಳ ಹೊಂದಾಣಿಕೆ ಇಲ್ಲದ ಬದುಕು ಮತ್ತು ಕಾವ್ಯ ಶ್ರೇಷ್ಠ ವಾಗುವುದಿಲ್ಲ ಎಂದು ಬಲವಾಗಿ ನಂಬಿದವರು. "ಪಂಪ ಕುಮಾರವ್ಯಾಸರನ್ನು ಓದಿ ಸಂತೋಷಪಡಲಾರದವನು ಆಧುನಿಕ ಕಾವ್ಯವನ್ನು ಓದಿ ನಿಜವಾಗಿಯೂ ಪುಳಕಿತನಾಗುತ್ತಾನೆ ಎಂದು ನಂಬುವುದು ಕಷ್ಟ "ಎಂಬ ಅವರ ಮಾತುಗಳು ಮುಖ್ಯವಾದವು.

**ನಾನು 1984ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ. ಎ. ವಿದ್ಯಾರ್ಥಿಯಾಗಿದ್ದ ಸಂದರ್ಭ. ಬೆಂಗಳೂರಿನ ಎಂ.ಇ.ಎಸ್. ಕಾಲೇಜಿನಲ್ಲಿ ಕನ್ನಡದ ಹಿರಿಯ ಕವಿ ಪು.ತಿ. ನರಸಿಂಹಾಚಾರ್ ಅವರ ಸಾಹಿತ್ಯ ಕುರಿತ ವಿಚಾರಗೋಷ್ಠಿ. ಗುರುಗಳಾಗಿದ್ದ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಿ ಆರ್ ನಾಗರಾಜ್, ಕೆ ವಿ ನಾರಾಯಣ್ ಮೊದಲಾದ ಹಲವರು ಭಾಗವಹಿಸಿ ದ್ದರು. ಉದ್ಘಾಟನಾ ಸಮಾರಂಭದಲ್ಲಿ ಪು.ತಿ.ನ. ಅವರಿಗೆ ಗೌರವ ಸನ್ಮಾನ ಮಾಡಲಾಯಿತು . ಕಾರ್ಯಕ್ರಮ ಕುರಿತು ಮಾತನಾಡಿದ ಕವಿ ಪುತಿನ ಅವರು ನಿರ್ಗಮಿಸಿದ ತರುವಾಯ ಗೋಷ್ಠಿಯ ಪ್ರಾರಂಭದಲ್ಲಿ ಕವಿ ಎಂ. ಗೋಪಾಲಕೃಷ್ಣ ಅಡಿಗರು "ಇಂದಿನ ಕಾರ್ಯಕ್ರಮಕ್ಕೆ ಪು.ತಿ.ನ. ಅವರು ಆಗಮಿಸಿದ್ದು ತುಂಬಾ ಸಂತೋಷದಾಯಕ. ಅವರನ್ನು ಶಾಲು, ಹಾರ, ಹಣ್ಣುಗಳಿಂದ ಗೌರವಿಸಿದ್ದು ಇನ್ನೂ ಒಳ್ಳೆಯದಾಯಿತು. ಅವರೀಗ ಕಾರ್ಯಕ್ರಮದಲ್ಲಿ ಇಲ್ಲವಲ್ಲ. ಹಾಗಾಗಿ ಇನ್ನು ಮೇಲೆ ಅವರ ಸಾಹಿತ್ಯವನ್ನು ಕುರಿತು ವಿಮರ್ಶಾತ್ಮಕವಾಗಿ ಚರ್ಚೆಗೆ ತೊಡಗಲು ಹೆಚ್ಚು ಅನುಕೂಲವಾಯಿತು" ಎಂದರು.**

**ಅಡಿಗರ ಮಾತುಗಳು ನೇರಾನೇರ, ಮೊನಚಾದ ಖಡ್ಗಕ್ಕಿಂತಲೂ ಹರಿತ, ಏನೇ ಮಾತನಾಡಲಿ ಹದವರಿತ ಮಾತಿನ ಶೈಲಿ ಅವರದಾಗಿತ್ತು ಎಂಬುದಕ್ಕೆ ಒಂದು ನಿದರ್ಶನ.**

"ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ" ಇದು ಕವಿಯ ಆದರ್ಶವೂ ಹೌದು. ಇಡೀ ಮಾನವ ಜನಾಂಗದ ಇತಿಹಾಸವನ್ನು ಸಮಕಾಲೀನ ಸ್ಥಿತಿಯನ್ನು ಭಿತ್ತಿಯಾಗಿಸಿಕೊಂಡ ಅಡಿಗರ ಕಾವ್ಯ ವ್ಯಕ್ತಿತ್ವ ವಿಕಾಸದ ಹೋರಾಟದ ಕಾವ್ಯವಾಗಿದೆ. ಅಡಿಗರ ಸಮಗ್ರಕಾವ್ಯವನ್ನು ಓದಿದರೆ ಆಧುನಿಕ ಮಹಾಕಾವ್ಯವನ್ನು ಓದಿದ ಅನುಭವವಾಗುತ್ತದೆ. ಭಾವ ತೀವ್ರತೆ, ಕೆಚ್ಚು, ಹೋರಾಟದ ಆಹ್ವಾನ ಕಾವ್ಯದುದ್ದಕ್ಕೂ ಹರಿದು ಬಂದಿರುವುದನ್ನು ಗಮನಿಸಬಹುದು.

"ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು" ಎಂಬ ಕೆಚ್ಚು ಇಂದಿನ ಯುವಪೀಳಿಗೆಯಲ್ಲಿ ಮೂಡಬೇಕಾಗಿದೆ. ಅದು "ನಾವೆಲ್ಲರೂ ಒಂದೇ ಜಾತಿ ಒಂದೇ ಮತ ಒಂದೇ ಕುಲ ನಾವು ಮನುಜರು "ಎಂಬ ಭದ್ರ ನೆಲೆಗಟ್ಟಿನ ಮೇಲೆ ನಿಂತಲ್ಲಿ ಆದಿಕವಿ ಪಂಪನ "ಮನುಷ್ಯ ಜಾತಿ ತಾನೊಂದೇ ವಲಂ "ಎನ್ನುವ ಮಾತು ನಿಜವಾಗುವುದರಲ್ಲಿ ಸಂಶಯವಿಲ್ಲ.

# ದುಃಖಿಸದಿರು ಮನವೇ....!

ಯಾರಿಗಿಲ್ಲ ನೋವು... ಯಾರಿಗಿಲ್ಲ ಸಾವು... ಬದುಕಿನಲ್ಲಿ ಪ್ರತಿಯೊಬ್ಬರಿಗೂ ದುಃಖ ಸಹಜ ದುಃಖವು ಪ್ರತಿದಿನ ಬದಲಾಗುವ ಒಂದು ಭಾವನೆಯಾಗಿದೆ ಜೀವನದಲ್ಲಿ ಇದರ ಏರಿಳಿತ ಸಹಜ ದುಃಖವೆಂಬ ಸಮುದ್ರದಲ್ಲಿ ಈಜಿ ದಡ ಸೇರುವವನೇ ನಿಜವಾದ ಸಾಧಕ.

ಇದು ಏಕಾತ್ಮಕವಾಗಿರುವುದಿಲ್ಲ ನಾವು ಅಂದುಕೊಂಡ ಮಾರ್ಗವನ್ನು ದುಃಖ ಅನುಸರಿಸುವುದಿಲ್ಲ ಬದಲಿಗೆ, ಇದು ಹೆಚ್ಚು ಸುರುಳಿಯಾಕಾರದ ಪಥವನ್ನು ತೆಗೆದುಕೊಳ್ಳುತ್ತದೆ, ಕೆಲವೊಮ್ಮೆ ತನ್ನಷ್ಟಕ್ಕೆ ತಾನೇ ತಿರುಗುತ್ತದೆ,ಒಮ್ಮೆ ಸಂತೋಷವನ್ನು ತಂದ ವಿಷಯಗಳಿಗೆ ಗೊಂದಲ,ವ್ಯಾಕುಲತೆ ಮತ್ತು ಮರಗಟ್ಟುವಿಕೆ ತರುತ್ತದೆ.

ಸಾಮಾನ್ಯವಾಗಿ, ನಮ್ಮ ಜೀವನ ನಿರಂತರ ಬದಲಾವಣೆಗಳ ಹೂರಣ ಅದು ನಾವು ನಿರೀಕ್ಷಿಸದ ರೀತಿಯಲ್ಲಿ ನಮ್ಮನ್ನು ಸ್ವಾಗತಿಸಿ ಪರೀಕ್ಷೆಗೆ ಒಡ್ಡುತ್ತದೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper

ದುಃಖದ ಸಂದರ್ಭಗಳು ನಮ್ಮನ್ನು ವಿಚಲಿತಗೊಳಿಸಿ ಖಾಲಿಯಾದ ಭಾವ ಮತ್ತು ಒಂಟಿತನದ ಅನುಭವಗಳು ದುಃಖದ ಹೊರತಾದ ದಿನಗಳು ಸ್ವಲ್ಪ ಪ್ರಕಾಶಮಾನ ವಾಗಿರಬಹುದು ಮತ್ತು ಬೆಳವಣಿಗೆಗೆ ಸಮಯ ತೆಗೆದು ಕೊಳ್ಳಬಹುದು ಧನಾತ್ಮಕತೆ ಅಳವಡಿಸಿಕೊಂಡು ದುಃಖ ದಿಂದ ಬೆಳೆಯಲು ಸಾಧ್ಯ ಎಂದು ಭಾವಿಸಬಹುದು.

ಬೆಳವಣಿಗೆಯು ಅಪರೂಪ ವಾಗಿ ಸುಲಭವಾಗಿರುತ್ತದೆ ಮತ್ತು ಯಾವಾಗಲೂ ಅದರೊಂದಿಗೆ ಕನಿಷ್ಠ ಕೆಲವು ಅಳತೆಯ ನೋವನ್ನು ತರುತ್ತದೆ.

ದುಃಖದಲ್ಲಿರುವ ಜನರಿಗೆ ನೋವು ಹೊಸದೇನಲ್ಲ ಅಂತಹ ನೋವಿನಿಂದ ಬೆಳವಣಿಗೆ ಸೇರಿದಂತೆ ಯಾವುದೇ ಒಳ್ಳೆಯದು ಬರಬಹುದು ಎಂದು ನಂಬಲು ಕೆಲವೊಮ್ಮೆ ಕಷ್ಟವಾಗಬಹುದು ಆದರೆ ಅಸಾಧ್ಯವೇನಲ್ಲ.

ನಮ್ಮನ್ನು ಹೆಚ್ಚು ಪ್ರೀತಿಸಿದ ಪ್ರೀತಿಪಾತ್ರರ,ಸ್ನೇಹಿತರ ಮರಣದ ನಂತರ ನಮ್ಮ ಹೃದಯ ಮತ್ತು ಆತ್ಮಗಳಲ್ಲಿ ಖಾಲಿತನವಿರುತ್ತದೆ,ಅದು ಮತ್ತೆ ಅದೇ ರೀತಿಯಲ್ಲಿ ತುಂಬಲು ಸಾಧ್ಯವಿಲ್ಲ ಆದರೆ ಈ ಆಳವಾದ ಹಂಬಲವು ನಮ್ಮ ಪ್ರೀತಿಪಾತ್ರರೊಂದಿಗೆ ನಾವು ಹಂಚಿಕೊಂಡ ಸಂಬಂಧದ ಶಕ್ತಿ ಮತ್ತು ಸೌಂದರ್ಯದ ಜ್ಞಾನವನ್ನು ತರಬಹುದು. ನಾವು ಅವರೊಂದಿಗೆ ಆನಂದಿಸಲ್ಪಟ್ಟ ಪ್ರತಿಕ್ಷಣ,ಪ್ರೀತಿ, ಸಮಯ ಸಂದರ್ಭ ಶಾಶ್ವತವಾಗಿ ಉಳಿಯುತ್ತದೆ ಎಂದು ಅದು ನಮಗೆ ನೆನಪಿಸುತ್ತದೆ.

ಇಂಥ ಅಮೂಲ್ಯವಾದ ಸಂಬಂಧಗಳು ಜೀವನದಲ್ಲಿ ಅಮೂಲ್ಯ ಪ್ರೀತಿ ಮತ್ತು ನಾವು ಹಂಚಿಕೊಳ್ಳುವ ಸಮಯ ಮತ್ತು ಸ್ಥಳವು ಪವಿತ್ರವಾಗಿದೆ. ಪತ್ರಗಳು,ಕರೆಗಳು ಮತ್ತು ಇಮೇಲ್‌ಗಳಿಗೆ ಪ್ರತಿಕ್ರಿಯಿಸುವ ಜೀವನದಲ್ಲಿ ನಿರಂತರ ಒತ್ತಡ ಮತ್ತು ಸುದ್ದಿಯಲ್ಲಿ ಹಿಂಸೆ ಮತ್ತು ದುರಂತದ ಉಪಸ್ಥಿತಿಯೊಂದಿಗೆ,ನಾವು ಆ ಒತ್ತಡಗಳಲ್ಲಿ ಸಿಲುಕಿಕೊಳ್ಳಬಹುದು ಮತ್ತು ನಮ್ಮ ಸ್ವಂತ ನೋವು ಮತ್ತು ದುಃಖವನ್ನು ನಿಜವಾಗಿಯೂ ಪರಿಹರಿಸಲು ವಿಫಲರಾಗಬಹುದು.

ನಮ್ಮ ಹೃದಯದಲ್ಲಿ ಸಂಭವಿಸುವ ಬದಲಾವಣೆಗಳನ್ನು ಗಮನಿಸಲು ಸಮಯವನ್ನು ಕಂಡುಹಿಡಿಯುವುದು ಕಷ್ಟಕರವಾಗಿರುತ್ತದೆ. ನಾವು ದುಃಖಿತರಾಗಿದ್ದಾಗ ಅನುಭವಿಸುವ ನೋವನ್ನು ನಾವೇ ಕಳೆದುಕೊಳ್ಳುವುದು ಕಷ್ಟಕರ ಅಸಾಧ್ಯವೇನಲ್ಲ ಅದನ್ನು ನಿಯಂತ್ರಿಸಲು ಧೈರ್ಯ ಮತ್ತು ಶಕ್ತಿಯ ಅಗತ್ಯವಿರುತ್ತದೆ

ದುಃಖದ ಪ್ರಯಾಣದ ಸಮಯದಲ್ಲಿ ನಮಗೆ ಕೊರತೆಯಿರುವ ಗುಣ ಲಕ್ಷಣಗಳೆಂದರೆ ನಾವು ದುಃಖವನ್ನು ಎದುರಿಸಲು ಸಾಧ್ಯವಾದರೆ –ಅದರ ಅಲೆಯನ್ನು ಸವಾರಿ ಮಾಡಲು ಮತ್ತು ಅದನ್ನು ನಮ್ಮ ಜೀವನದಲ್ಲಿ ಅನುಮತಿಸಲು ನಾವು ಅಶಕ್ತರಲ್ಲ ಎಂದು ನಾವು ಕಂಡುಕೊಳ್ಳಬಹುದು.

ನೀವು ದುಃಖದ ಹಾದಿಯಲ್ಲಿ ನಡೆಯುತ್ತಿದ್ದರೆ,ನಿಮ್ಮ ದುಃಖವನ್ನು



ಕಳೆಯಲು ಸಮಯವನ್ನು ಹುಡುಕಲು ನೀವು ಕುಟುಂಬದ ಸದಸ್ಯರು,ಸಲಹೆ ನೀಡುವವರೊಡನೆ ಮಾತನಾಡುವುದು,ಕಲೆ ಅಥವಾ ಸಂಗೀತದ ಮೂಲಕ ನಿಮ್ಮ ದುಃಖದ ಅಭಿವ್ಯಕ್ತಿಯಲ್ಲಿ ತೊಡಗಿಸಿಕೊಳ್ಳುವುದು ಅಥವಾ ನೆಚ್ಚಿನ ಕುರ್ಚಿಯಲ್ಲಿ ಸದ್ದಿಲ್ಲದೆ ಕುಳಿತು ನಿಮ್ಮ ನೆನಪುಗಳು ಮತ್ತು ಕಣ್ಣೀರನ್ನು ಹರಿಯುವಂತೆ ಮಾಡುವ ಮೂಲಕ.

ಸಾವಧಾನತೆ ವ್ಯಾಯಾಮಗಳಿಂದ, ಮತ್ತು ನೀವು ಕುಳಿತುಕೊಳ್ಳುವಾಗ ನಿಮ್ಮ ಉಸಿರಾಟದ ಮೇಲೆ ಕೇಂದ್ರೀಕರಿಸಲು ಸಹ ಇದು ಸಹಾಯ ಮಾಡುತ್ತದೆ. ಪೂರಕ, ರೇಚಕ ಹಾಗೂ ಕುಂಭಕ ಉಸಿರಾಟದ ವ್ಯಾಯಾಮ ನಿಮಗೆ ಅಗತ್ಯವಾಗಿ ಅನುಕೂಲ ನೀಡಬಹುದು. ನಿಮ್ಮ ದುಃಖದ ಮೂಲಕ ಕೆಲಸ ಮಾಡುವುದು ನಿಮಗೆ ಸಾಧ್ಯವಾಗುವ ಯಾವುದೇ ಸಣ್ಣ ರೀತಿಯಲ್ಲಿ, ಚಿಕಿತ್ಸೆ, ಶಾಂತಿ ಮತ್ತು ಬೆಳವಣಿಗೆಯನ್ನು ಅನುಭವಿಸಲು ಪ್ರಾರಂಭಿಸಲು ನಿಮಗೆ ಅವಕಾಶವನ್ನು ನೀಡುತ್ತದೆ.

ಈ ಜಗತ್ತಿನಲ್ಲಿ ಎಲ್ಲವೂ ಸಾಧ್ಯ! ಧನಾತ್ಮಕವಾಗಿ ಆಲೋಚಿಸಿ ಅಳವಡಿಸಿಕೊಂಡು ಋಣಾತ್ಮಕ ಚಿಂತನೆಗಳನ್ನು ದೂರವಿಟ್ಟು ಬದುಕಿದಾಗ ಮಾತ್ರ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಮಾ.3ರಿಂದ ಅಧಿವೇಶನ-ಮಾ.7 ಆಯವ್ಯಯ ಮಂಡನೆ

## ಸಿಎಂ ಸಿದ್ದರಾಮಯ್ಯ ಹೇಳಿಕೆ । ಬೆಲೆಯೇರಿಕೆ ತಗ್ಗಿಸಲು ಪ್ರಯತ್ನ । ನಾಯಕತ್ವ ಬದಲಾವಣೆ ವರಿಷ್ಠರಿಗೆ ಬಿಟ್ಟಿದ್ದು

■ ಹಂಪಿ ಟೈಮ್ಸ್ ಬೆಂಗಳೂರು

ವಿಧಾನಮಂಡಲದ ಅಧಿವೇಶನ ಮಾರ್ಚ್ 3, 2025 ರಿಂದ ಪ್ರಾರಂಭವಾ ಗಲಿದ್ದು, ನೂತನ ವರ್ಷದ ಮೊದಲನೇ ಅಧಿವೇಶನ ವಾದ್ದರಿಂದ ರಾಜ್ಯಪಾಲರು ಮೂರನೇ ತಾರೀಖಿನಂದು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮಂಗಳವಾರದಿಂದ ಗುರುವಾರದವರೆಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆದು, ಮಾರ್ಚ್ 7 ರಂದು, 2025-2026 ನೇ ಸಾಲಿನ ಆಯ ವ್ಯಯವನ್ನು ಮಂಡಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ಮಾಧ್ಯಮದವ ರೊಂದಿಗೆ ಮಾತನಾಡಿದರು. ಆಯ ವ್ಯಯದ ಮೇಲೆ ಚರ್ಚೆ ನಡೆದು ಉತ್ತರವನ್ನು ಮಾರ್ಚ್ ತಿಂಗಳ ಕೊನೆಯಲ್ಲಿ ನೀಡಲಾಗುವುದು. ಅಧಿವೇಶನ ಎಷ್ಟು ದಿನದವರೆಗೆ ನಡೆಸಬೇಕೆಂದು ವ್ಯವಹಾರ ಸಲಹಾ ಸಮಿತಿಯಲ್ಲಿ ತೀರ್ಮಾನ ಮಾಡಲಾಗುವುದು ಎಂದರು. ಸರ್ಕಾರ ರೈತರ ಹಿತವನ್ನು ಕಾಪಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ವಿವಿಧ ಇಲಾಖೆಗಳೊಂದಿಗೆ ಆಯವ್ಯಯ ಪೂರ್ವಭಾವಿ ಸಭೆ ನಡೆಸಲಾಗಿದ್ದು, ಇಂದು ರೈತ ಸಂಘಟನೆಯ ಮುಖಂಡರೊಂದಿಗೆ ಸಭೆ ನಡೆಸಿದ್ದು, ಅವರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ತಯಾರಿಸುವಾಗ ಇತಿಮಿತಿಯೊಳಗೆ ಸಲಹೆಗಳನ್ನು ಸೇರ್ಪಡೆ ಮಾಡಲಾಗುವುದು. ಕರ್ನಾಟಕ ಸರ್ಕಾರ ರೈತರ ಹಿತವನ್ನು ಕಾಪಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ಯಾವತ್ತೂ ರೈತರ ಪರವಾಗಿದ್ದು, ಕೃಷಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿ ಇರಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.



**ಬೆಲೆಯೇರಿಕೆ ತಗ್ಗಿಸಲು ಪ್ರಯತ್ನ:** ಬೆಲೆಯೇರಿಕೆ ಹೆಚ್ಚಾಗಿರುವುದರಿಂದ ನಿರೀಕ್ಷೆಗಳು ಕೂಡ ಹೆಚ್ಚಾಗಿವೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡೂ ಮಾಡುತ್ತವೆ. ಕೇಂದ್ರ ಸರ್ಕಾರದ ಬೆಲೆ ಏರಿಕೆ ಕುರಿತು ಹೆಚ್ಚಿನ ಒತ್ತು ನೀಡಬೇಕು. ರಾಜ್ಯ ಸರ್ಕಾರ ಬೆಲೆಯೇರಿಕೆ ತಗ್ಗಿಸಲು ಸಾಧ್ಯವಾದಷ್ಟೂ ಪ್ರಯತ್ನ ಮಾಡಲಿದೆ ಎಂದರು .

ಮೆಟ್ರೋ ದರ ನಿಗದಿ ಮಾಡುವುದು ಕೇಂದ್ರ ಸರ್ಕಾರದ ನೇಮಕ ಮಾಡಿರುವ ಸಮಿತಿ ಅಧ್ಯಕ್ಷರು. ಮೆಟ್ರೋ ರೈಲಿನ ದರ ನಿಗದಿ ಮಾಡುವುದು ಕೇಂದ್ರ ಸರ್ಕಾರ ನೇಮಕ ಮಾಡಿರುವ ಸಮಿತಿ. ಮೆಟ್ರೋ ಸ್ವಾಯತ್ತ ಸಂಸ್ಥೆಯಾದರೂ, ಸಮಿತಿಯಲ್ಲಿ ಇಬ್ಬರು ಕೇಂದ್ರ ಸರ್ಕಾರದ ಪ್ರತಿನಿಧಿಗಳು ಹಾಗೂ ಇಬ್ಬರು ರಾಜ್ಯ ಸರ್ಕಾರದ ಪ್ರತಿನಿಧಿಗಳಿರುತ್ತಾರೆ. ಬೆಲೆ ನಿಗದಿ ಮಾಡಲು ರಾಜ್ಯ ಸರ್ಕಾರ ಪ್ರಸ್ತಾವನೆ ನೀಡುತ್ತದೆ. ಬೆಲೆ ನಿಗದಿ ಮಾಡುವುದು ಸಮಿತಿ. ಅಧ್ಯಕ್ಷರನ್ನು ನೇಮಕ ಮಾಡುವುದು ಕೇಂದ್ರ ಸರ್ಕಾರ. ಪ್ರಸ್ತುತ ತಮಿಳುನಾಡು ರಾಜ್ಯದ ನಿವೃತ್ತ ನ್ಯಾಯಾಧೀಶರು ಅಧ್ಯಕ್ಷರಾಗಿದ್ದಾರೆ ಎಂದು ತಿಳಿಸಿದರು.

**ಯೋಜನೆಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ:** ಅನ್ನಭಾಗ್ಯ ಯೋಜನೆಯ ಮೊತ್ತ ಐದು ತಿಂಗಳಿನಿಂದ ಹಾಗೂ ಗೃಹಲಕ್ಷ್ಮೀ ಯೋಜನೆಯ ಮೊತ್ತ ಮೂರು ತಿಂಗಳಿನಿಂದ ಜಮಾ ಆಗಿಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು, ಯಾವ ಯೋಜನೆಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಪಾವತಿ ಮಾಡದೇ ಹೋಗಿದ್ದರೆ ಮಾಡುತ್ತೇವೆ. ಪಾವತಿಯಲ್ಲಿ ವಿಳಂಬ ವಾಗಿದ್ದರೆ ಪರಿಶೀಲಿಸಿ ಕೂಡಲೇ ಬಿಡುಗಡೆ ಮಾಡಲಾಗುವುದು ಎಂದರು.

**ಜಿಲ್ಲಾ ಮತ್ತು ತಾಪಂ ಚುನಾವಣೆಗಳಗೆ ಸಿದ್ಧ :** ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣೆಗಳಿಗೆ ನಾವು ಸಿದ್ಧರಾಗಿದ್ದು, ಉಚ್ಚ ನ್ಯಾಯಾಲಯದ ಸೂಚನೆ ಮೇರೆಗೆ ಚುನಾವಣೆ ಮಾಡಲಾಗುವುದು ಎಂದರು.

**ಜಲ್ ಜೀವನ್ ಮಿಷನ್:** ಕೇಂದ್ರದ ಪಾಲು ಬಂದಿಲ್ಲ ಜಲ್ ಜೀವನ್ ಮಿಷನ್ ಯೋಜನೆಯಡಿ ಕಾಮಗಾರಿಗಳನ್ನು ನಮ್ಮ ವೇಗಕ್ಕೆ ಅನುಗುಣವಾಗಿ ಮಾಡುತ್ತಿಲ್ಲ. ಕೇಂದ್ರ ಸರ್ಕಾರದ ಪಾಲನ್ನು ಅವರು ಕೊಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಟ್ವೀಟ್ ಮಾಡಲಾಗಿತ್ತು ಎಂದರು.

**ನಾಯಕತ್ವ ಬದಲಾವಣೆ:** ಪಕ್ಷದ ವರಿಷ್ಠರಿಗೆ ಬಿಟ್ಟಿದ್ದು ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುತ್ತಾ ಈ ಕುರಿತು ಪಕ್ಷದ ಹೈ ಕಮಾಂಡ್ ತೀರ್ಮಾನಿಸಲಿದ್ದಾರೆ ಎಂದರು.

# ಸಂಕುಚಿತ ಭಾವನೆಯಿಂದ ಹೊರಬರಬೇಕು

## ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಆಶೀರ್ವಚನ । ರಥೋತ್ಸವ ಪೂರ್ವಭಾವಿ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ



ಮನುಷ್ಯ ಸಂಕುಚಿತ ಭಾವದಿಂದ ಹೊರಬರಬೇಕಿದೆ. ಸರ್ವ ಧರ್ಮಗಳ ಸಮನ್ವಯ ಸೂತ್ರವನ್ನು ಎಲ್ಲರೂ ಅನ್ವಯಿಸಿಕೊಂಡರೆ ದೇಶದ ಹಲವು ಗೊಂದಲಗಳಿಗೆ, ದ್ವಂದ್ವಗಳಿಗೆ, ಸಂಕುಚಿತ ಭಾವನೆಗೆ ಮುಕ್ತಿ ದೊರಕುತ್ತದೆ ಎಂದು ಶ್ರೀ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿ ಗಳವರು 2018ರಲ್ಲಿ ದೂರದೃಷ್ಟಿ ಯಿಂದ ಈ ಸರ್ವಧರ್ಮ ಸಮನ್ವಯ ರಥೋತ್ಸವವನ್ನು ಪ್ರಾರಂಭಿಸಿದ್ದಾರೆ ಎಂದು ನಗರದ ಕೊಟ್ಟೂರು ಸಂಸ್ಥಾನ ಮಠದ ಶ್ರೀಮಠದ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.



ನಗರದ ಶ್ರೀಕೊಟ್ಟೂರು ಸಂಸ್ಥಾನಮಠದಲ್ಲಿ ಭಾನುವಾರ ಸಂಜೆ ಸರ್ವಧರ್ಮ ಸಮನ್ವಯ ರಥೋತ್ಸವ-2025ರ ಅಂಗವಾಗಿ ಪೂರ್ವಭಾವಿ ಸಮಾಲೋಚನಾ ಸಭೆಯ ಸಾನ್ನಿಧ್ಯವಹಿಸಿ ಮಾತನಾಡಿದರು. 'ಜಾತಿ ವ್ಯವಸ್ಥೆಗೆ ಜಾತಿ ಸಾಮರಸ್ಯವೇ ಪರಿಹಾರವಾಗಿರುವಂತೆ, ಕೋಮುವಾದಕ್ಕೆ ಸರ್ವಧರ್ಮ ಸಮನ್ವಯತೆಯೇ ಪರಿಹಾರವಾಗಿದೆ. ಮಾ.10ರಂದು ನಡೆಯಲಿರುವ ಸರ್ವಧರ್ಮ ರಥದಲ್ಲಿ ಯಾವುದೇ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸದೇ, ಎಲ್ಲ ಧರ್ಮಗಳ ಪವಿತ್ರ ಧರ್ಮಗ್ರಂಥಗಳನ್ನು ಉತ್ಸವದ ಮೂಲಕ ತಂದು ರಥದಲ್ಲಿ ಪ್ರತಿಷ್ಠಾಪಿಸಿ, ರಥೋತ್ಸವವನ್ನು ಎಳೆಯಲಾ ಗುತ್ತದೆ. ಈ ವರ್ಷದ ರಥೋತ್ಸವವು ತನ್ನ ಮೂಲ ಆಶಯಕ್ಕೆ ತಕ್ಕಂತೆ ಸರ್ವರಲ್ಲೂ ಸಮತೆ, ಸದ್ಭಾವನೆ ಮೂಡಿಸುವಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರವಚನ ಕಾರ್ಯಕ್ರಮವು ಪ್ರಾರಂಭವಾಗಲಿದೆ. ಸಮಸ್ತ ಧರ್ಮ, ಜಾತಿ-ಪಂಗಡ, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸದ್ಭಕ್ತರು ಈ ರಥೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಆಶೀರ್ವಚನ ನೀಡಿದರು.

ನಗರದ ವಿವಿಧ ಸಮಾಜಗಳ ಅಧ್ಯಕ್ಷರುಗಳು, ಪದಾಧಿಕಾರಿಗಳು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ತಾಲ್ಲೂಕಿನ ಸುತ್ತಮುತ್ತಲಿನ ಹಲವು ಗ್ರಾಮಗಳ ಸದ್ಭಕ್ತರು ಇದ್ದರು. ಸಮುದಾಯಗಳ ಮುಖಂಡರುಗಳು ರಥೋತ್ಸವವನ್ನು ಅತ್ಯಂತ ಯಶಸ್ವಿಗೊಳಿಸಲು ನಾವೆಲ್ಲರು ಸಿದ್ಧ ಎಂದು ಪೂಜ್ಯರಿಗೆ ತಿಳಿಸಿದರು.

# ಫೆ.18 ರಂದು ಕಂಪ್ಲಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ : ಎಇಇ ಜೆಸ್ಕಾಂ

■ ಹಂಪಿ ಟೈಮ್ಸ್ ಕಂಪ್ಲಿ

ಕಂಪ್ಲಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗ ವ್ಯಾಪ್ತಿಯ ಬರುವ ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರಿಗೆ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಫೆ.18 ರಂದು ಬೆಳಿಗ್ಗೆ 12 ಗಂಟೆಗೆ ಕಂಪ್ಲಿ ಜೆಸ್ಕಾಂ ಕಚೇರಿ ಆವರಣದಲ್ಲಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ಆಯೋಜಿಸಲಾಗಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತರಬೇತಿ ಕಾರ್ಯಾಗಾರದಲ್ಲಿ ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ನಿರ್ದೇಶನ

# ಜೆಜೆಎಂ ಅನುದಾನ ಪೋಲಾಗದಿರಲಿ

■ ಹಂಪಿ ಟೈಮ್ಸ್ ಬಳ್ಳಾರಿ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಪೂರ್ಣ ಕುಡಿಯುವ ನೀರಿನ ಪೂರೈಕೆಯ ಯೋಜನೆಯಾದ ಜಲಜೀವನ್ ಮಿಷನ್ ಕಾರ್ಯದ ಅನುದಾನ ಪೋಲಾಗದಂತೆ ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಹೇಳಿದರು.



ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಿಲ್ಲಾ ಪಂಚಾಯತ್ ಇವರ ಸಹಯೋಗದಲ್ಲಿ ಫೀಡ್‌ಬ್ಯಾಕ್ ಫೌಂಡೇಶನ್ ವತಿಯಿಂದ ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಸೋಮವಾರ ಆಯೋಜಿಸಿದ್ದ ನಾಲ್ಕು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿ ದರು. ಗ್ರಾಮೀಣ ಜನರಿಗೆ ಕುಡಿಯುವ ನೀರನ್ನು ಒದಗಿಸುವ ಈ ಮಹತ್ವಾಕಾಂಕ್ಷಿ ಯೋಜನೆ ಕುರಿತು ಜನರಿಗೆ ಮನವರಿಕೆ ಮಾಡಿಕೊಡಬೇಕು. ಹೀಗಾಗಿ ಕಾರ್ಯಾಗಾರ ಆಯೋಜಿಸಲಾಗಿದ್ದು, ಅವಳಿ ಜಿಲ್ಲೆಯ (ಬಳ್ಳಾರಿ ಮತ್ತು ವಿಜಯನಗರ) ಅಧಿಕಾರಿಗಳು, ಸಿಬ್ಬಂದಿಗಳು ಸರಿಯಾದ ಮಾಹಿತಿ ಪಡೆದುಕೊಳ್ಳಬೇಕು. ಯೋಜನೆಯ ಬಗ್ಗೆ ಕಾರ್ಯಗಾರದಲ್ಲಿ ಪಡೆದುಕೊಂಡ ಸಮಗ್ರ ವಿವರದೊಂದಿಗೆ ಕಾರ್ಯ ಯೋಜನೆ ರೂಪಿಸಿಕೊಂಡು ಯೋಜನೆ ಅನುಷ್ಠಾನಕ್ಕೆ ಸಹಕರಿಸಬೇಕು ಎಂದರು.

ಸಮುದಾಯದ ಜನರ ಪರಸ್ಪರ ಸಹಕಾರದೊಂದಿಗೆ ಜಲ ಜೀವನ್ ಮಿಷನ್ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಧಿಕಾರಿ ಮತ್ತು ಸಿಬ್ಬಂದಿಗಳು ಶ್ರಮಿಸಬೇಕು. ಇದಕ್ಕೆ ಆಯಾ ಗ್ರಾಪಂ ಅಧ್ಯಕ್ಷರು ಹಾಗೂ ಪಿಡಿಒ ಅಧಿಕಾರಿಗಳು ಕೈಜೋಡಿಸಬೇಕು ಎಂದು ತಿಳಿಸಿದರು.

ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನವು ಗುಣಮಟ್ಟತೆಯಿಂದ ಕೂಡಿರಬೇಕು. ಗುಣ ಮಟ್ಟತೆಯ ಆಧಾರದ ಮೇಲೆ ವಿಶ್ವಬ್ಯಾಂಕ್ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಮುಖ್ಯವಾಗಿ ಪೈಪ್ ಅಳವಡಿಕೆ ಕಾರ್ಯಕ್ಕೆ ಪ್ರಾಮುಖ್ಯತೆ ನೀಡಬೇಕು. ಕಲುಷಿತ ನೀರು ಸರಬರಾಜು ಮೂಲಗಳಿಂದ ದೂರ ಇರುವಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಅಧಿಕಾರಿ ಮತ್ತು ಸಿಬ್ಬಂದಿಗಳು ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವಾಗ ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಂಡು ಕಾರ್ಯನಿರ್ವಹಿಸುವುದು ಜವಾಬ್ದಾರಿಯಾಗಿದೆ ಎಂದರು.

ಕ್ಷೇತ್ರ ಮಟ್ಟದಲ್ಲಿ ಕಾರ್ಯಕ್ರಮಗಳ ಜೊತೆಗೆ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಅನುಷ್ಠಾನವಾಗುತ್ತಿರುವ ಕಾಮಗಾರಿಗಳ ಬಗ್ಗೆಯು ಸಂಪೂರ್ಣವಾದ ಮಾಹಿತಿ ಹೊಂದಿರಬೇಕು. ಯೋಜನೆಯ ಬಗ್ಗೆ ಯಾವುದೇ ನ್ಯೂನತೆಗಳಿದ್ದರೆ ಸಾಧ್ಯವಾದಷ್ಟು ತಮ್ಮ ಹಂತದಲ್ಲಿಯೇ ಬಗೆಹರಿಸಲು ಶ್ರಮಿಸಬೇಕು. ಅದೇರೀತಿ ಯೋಜನೆಯ ಮಹತ್ವವನ್ನು ತಿಳಿಸಿ ಆ ಯೋಜನೆಯು ಅನುಷ್ಠಾನ ಮಟ್ಟದಲ್ಲಿ ಎಲ್ಲರ ಜೊತೆ ಸೇರಿ ಕೆಲಸ ಮಾಡಿದರೆ ಮಾತ್ರ ಈ ಯೋಜನೆಯು ಯಶಸ್ವಿಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಗಾರದಲ್ಲಿ ಗುರುಗಾವ್‌ನ ಫೀಡ್ ಬ್ಯಾಕ್ ಫೌಂಡೇಶನ್‌ನ ಸಿಇಒ ಅಜಯ್ ಸೀನಾ ಅವರು ಶಿಬಿರಾರ್ಥಿಗಳಿಗೆ ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನದ ಕುರಿತು ತರಬೇತಿ ನೀಡಿದರು.

ಜಿಪಂ ಉಪಕಾರ್ಯದರ್ಶಿ ಗಿರಿಜಾ ಶಂಕರ್, ಜಿಪಂ ಮುಖ್ಯ ಲೆಕ್ಕಾಧಿಕಾರಿ ಪರಿಮಳ, ಜಿಪಂ ಯೋಜನಾ ನಿರ್ದೇಶಕ ವಿನೋದ್ ಕುಮಾರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇಇ ಹೆಚ್.ಇಂಧುದಾರ್, ವಿಜಯನಗರ ಜಿಲ್ಲೆಯ ದೀಪಾ.ಎಸ್., ಫೀಡ್ ಬ್ಯಾಂಕ್ ಫೌಂಡೇಶನ್‌ನ ರಾಜ್ಯ ಯೋಜನಾ ಸಮನ್ವಯಾಧಿಕಾರಿ ಡಾ.ನಂದ ಕುಮಾರ್ ಸೇರಿದಂತೆ ಅಧಿಕಾರಿಗಳಿದ್ದರು.

## ಕವಿ ಮನಸು

### ಪದವಿಗಳು ಬೇಕಿಲ್ಲ

ಅಪ್ಪ ಅಮ್ಮರು ಎಮ್ಮ
ಕಳಿಸಿಹರು ಇಲ್ಲಿ
ದಾಸವಾಣಿಯ ಜಗಕೆ ಸಾರಿರೆಂದು
ಕೂಸುಗಳು ಇವರೇನು
ಪಾಡುವರು ಎನ್ನದೆ
ಲೇಸಾಗಿ ಗುರುದೀಕ್ಷೆ ದೊರೆಯಿತಂದು..

ಕೇಳುಗರು ಇಹರೆಂದು
ಹಾಡಲಿಕೆ ಬಂದಿಲ್ಲ
ದಾಸವಾಣಿಯು ಜಗದಿ ಕೋಗಿಲೆಯ ಗಾನ
ನಮ್ಮೊಳಗೆ ನಮ್ಮನ್ನ
ಅಡಗಿರುವ ಜಗವನ್ನ
ಅರಿಯಲಿದುವೆ ಎಮಗೆ ಅಮೃತದ ಪಾನ...

ಪದವನಾಡಲು ಆವ
ಪದವಿಗಳು ಬೇಕಿಲ್ಲ
ಪದುಮನಾಭನ ಅಭಯ ಒಂದೆ ಸಾಕು
ಪದ ಪದಗಳೊಳಗೆಲ್ಲ
ಸಂಪದವನಿಟ್ಟಿರುವ
ದಾಸವಾಣಿಯ ತೆರದಿ ಬದುಕಬೇಕು....

ನೊಂದ ಮನಕೆ ಶಾಂತಿ
ಬೆಂದ ಮನಕೆ ಕಾಂತಿ
ನೀಡುವುದು ಸಂಗೀತದಾಲಾಪವು
ಭೇದಭಾವಗಳಿಲ್ಲ
ಛೇದಗಳು ಇಲ್ಲಿಲ್ಲ
ಕಲಿಯಬಹುದೋ ಅಣ್ಣ ನಾವು ನೀವು...

– ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 17-02-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1611.84 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9821 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 41.327 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1587.83 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 142 ಕ್ಯುಸೆಕ್ |
| ಸಾಮರ್ಥ್ಯ | 9.313 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

18-02-2025 – ಮಂಗಳವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಚಿತ್ತ |
| ಯೋಗ | : ಗಂಡ |
| ಕರಣ | : ಗರಜ |
| ಸೂರ್ಯೋದಯ | : 06:58:27 |
| ಸೂರ್ಯಾಸ್ತ | : 18:23:29 |
| ರಾಹು ಕಾಲ | : 15:32–16:58 |
| ಯಮಘಂಡ ಕಾಲ | : 09:50–11:15 |
| ಗುಳಿಕ ಕಾಲ | : 12:41–14:07 |


ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE READERS
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com

Grow Your Business With Us



S.M.Traders & Services

Authorised Distributor for ATLAS COPCO Portable Screw Air Compressors for North Karnataka

Water Well and Non Water Well Applications

web: www.smtradersandservices.com

M: 9686663125 - 9686663132

Atlas Copco

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

# ರಾತ್ರಿ ಶಾಲೆಗಳಿಗೆ ಶಾಸಕ ಭೇಟಿ

## ಫೆ.20 ರಂದು ಫಲಿತಾಂಶ ಸುಧಾರಣೆಗೆ ವಿಷನ್ 625

## ಬಿಇಒ ಎಂ.ಚನ್ನಬಸಪ್ಪ ಹೇಳಿಕೆ | ಶಾಸಕರ ಮೆಚ್ಚುಗೆ





■ **ಹಂಪಿ ಟೈಮ್ಸ್ ಹೊಸಪೇಟೆ**

ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆ ಮಾಡುವ ನಿಟ್ಟಿನಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಆದ್ಯತೆ ನೀಡಲಾಗಿದ್ದು, ಶಾಲಾ ಅವಧಿಗೂ ಮುನ್ನ ಒಂದು ಗಂಟೆ ಮತ್ತು .ಶಾಲೆ ಬಿಟ್ಟ ನಂತರವೂ ರಾತ್ರಿ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ ಹೊಸಪೇಟೆ ತಾಲೂಕು ಕ್ಷೇತ್ರಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ ತಿಳಿಸಿದ್ದಾರೆ.

ತಾಲೂಕಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರ ಸಹಕಾರದಿಂದ ಮಕ್ಕಳಿಗೆ ಕಲಿಕಾಸರೆ ಪುಸ್ತಕಗಳನ್ನು ನೀಡಿ ಬರವಣಿಗೆ ಕೌಶಲ್ಯ ಹೆಚ್ಚಿಸಲು ತರಬೇತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಉತ್ತೀರ್ಣರಾಗಲು ಸಹಕಾರಿಯಾಗುವಂತೆ ಈಗಾಗಲೇ ವಿಶೇಷ ಹಾಗೂ ವಿವಿಧ



ಪಾಸಿಂಗ್ ಪ್ಯಾಕೇಜ್, ಟಿಪ್ಸ್ ನೀಡಲಾಗಿದೆ. ಪರೀಕ್ಷೆ ಎಂದರೆ ವಿದ್ಯಾರ್ಥಿಗಳಲ್ಲಿ ಸಂಭ್ರಮ ಮನೆಮಾಡಬೇಕೆಂದು ಈಗಾಗಲೇ ಹಂಪಿ ಟೈಮ್ಸ್ ದಿನಪತ್ರಿಕೆ ಸಹಯೋಗದೊಂದಿಗೆ ಫೋನ್ ಇನ್‌ಕಾರ್ಯಕ್ರಮ ನಡೆಸಲಾಗಿದ್ದು, ಒಂದು ಗಂಟೆಯಲ್ಲಿ 300ಕ್ಕೂ ಬಂದ ವಿದ್ಯಾರ್ಥಿಗಳ ಕರೆಗಳಿಗೆ ಶಿಕ್ಷಕರು ಉತ್ತರಿಸಿ ಮಕ್ಕಳಲ್ಲಿನ ಗೊಂದಲಗಳಿಗೆ ಪರಿಹಾರ ಸೂಚಿಸಿದ್ದಾರೆ. ಫೆ.20 ರಂದು ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯವು ಹಂಪಿ ಟೈಮ್ಸ್ ಸಹಯೋಗದೊಂದಿಗೆ ಎಸ್ಸೆಸ್ಸೆಲ್ಸಿ ವಿಸನ್ 625 ಹಮ್ಮಿಕೊಂಡಿದ್ದು, ವಿದ್ಯಾರ್ಥಿಗಳಿಗೆ ವಿಷಯ ತಜ್ಞರಿಂದ ಶೇ.100 ಫಲಿತಾಂಶ ಸಾಧಿಸುವ ಬಗೆ ಕುರಿತು ತಿಳಿಸಲಾಗುವುದು. ಕ್ಷೇತ್ರದಲ್ಲಿ ಹಿಂದೆಂದಿಗಿಂತಲೂ ವಿಭಿನ್ನ ರೀತಿಯಲ್ಲಿ ಕಾರ್ಯಕ್ರಮಗಳ ಮೂಲಕ ಫಲಿತಾಂಶ ಸುಧಾರಣೆ ಶ್ರಮಿಸಲಾಗುತ್ತಿದೆ ಎಂದರು.

ಶಾಸಕ ಎಚ್.ಆರ್.ಗವಿಯಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು ಚಿತ್ತವಾಡಗಿಯಲ್ಲಿ ನಡೆಯುತ್ತಿರುವ ರಾತ್ರಿ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯನ್ನು ವೀಕ್ಷಿಸಿ ಸಂತಸ ಸಂತಸ ವ್ಯಕ್ತಪಡಿಸುವುದರೊಂದಿಗೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶಿಕ್ಷಣ ಇಲಾಖೆಯು ಕೈಗೊಳ್ಳುವ ಕಾರ್ಯಗಳಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದ್ದಾರೆ.

# ಕೂಲಿಕಾರ್ಮಿಕರಿರುವ ಕಡೆ ಆರೋಗ್ಯ ಶಿಬಿರ

## ಶಾಸಕ ಡಾ.ಎನ್.ಟಿ. ಶ್ರೀನಿವಾಸ ಹೇಳಿಕೆ | ಸಿದ್ದಯ್ಯನಕೋಟೆಯಲ್ಲಿ ಉಚಿತ ಕಣ್ಣಿನ ತಪಾಸಣೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಅತ್ಯಂತ ಬಡಕೂಲಿ ಕಾರ್ಮಿಕರು ಇರುವ ಈ ಭಾಗದಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು ಗಡಿನಾಡ ಸಾಂಸ್ಕೃತಿಕ ಉತ್ಸವಗಳಲ್ಲಿ ನೆರವೇರಿಸಲಾಗುವುದು ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ ಹೇಳಿದರು.

ತಾಲೂಕಿನ ಗಡಿನಾಡು ಭಾಗದ ಸಿದ್ದಯ್ಯನಕೋಟೆ ಗ್ರಾಮದಲ್ಲಿ ಭಾನುವಾರ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದರು. ಮಾನವೀಯ ನೆಲಗಟ್ಟಿನ ಹಿನ್ನೆಲೆಯಲ್ಲಿ ಚಿತ್ತರಗಿ ಇಳಕಲ್ಲು ಶ್ರೀ ವಿಜಯ ಮಹಾಂತೇಶ್ವರರು ಈ ಭಾಗದ ಜನರ ಕಡು ಕಷ್ಟಗಳನ್ನು ಕಣ್ಣಾರೆ ಕಂಡು ಶಾಖಾ ಮಟವನ್ನು ಸ್ಥಾಪಿಸಿದ್ದಾರೆ. ತ್ರಿವಿಧ ದಾಸೋಹಗಳನ್ನು ನಡೆಸುವ ಮೂಲಕ ಇಲ್ಲಿನ ಮಕ್ಕಳಿಗೆ ಶಿಕ್ಷಣ ಪಡೆಯಲು ಅನುಕೂಲ ಕಲ್ಪಿಸಿದ್ದಾರೆ. ವಿಶೇಷವಾಗಿ ದುಶ್ಚಟಗಳನ್ನು ಬಿಡಿಸುವ ಹಿನ್ನೆಲೆಯಲ್ಲಿ ಮಹಂತನ ಜೋಳಿಗೆಗೆ ನಶೆ ವಸ್ತುಗಳಿಗೆ ದಾಸರಾದವರಿಂದ ಬೀಡಿ, ಸಿಗರೇಟು, ಮದ್ಯ ಪಾನದ ಶೀಶೆಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡು ದುಶ್ಚಟಗಳಿಂದ ಮುಕ್ತರಾಗು ವಂತೆ ಮಾಡುತ್ತಿದ್ದರು ಎಂದು ತಿಳಿದುಕೊಂಡಿದ್ದೇನೆ. ಈ ಪರಂಪರೆಯನ್ನು ಇಂದಿಗೂ ಸಹ ಮುಂದುವರಿಸಿಕೊಂಡು ಈ ಭಾಗದ ಜನರನ್ನು ಸನ್ಮಾರ್ಗಕ್ಕೆ ಕರೆದೊಯ್ಯುವ ಕೆಲಸವನ್ನು ಶಾಖಾ ಮಠದ ಪೀಠಾಧಿಪತಿಗಳಾದ ಬಸವಲಿಂಗ ಮಹಾಸ್ವಾಮಿಗಳ ಕಾರ್ಯ ಬೆಲೆ ಕಟ್ಟಲಾಗದು ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ ಹೇಳಿದರು. ಹಲವು ದಶಕಗಳ ಹಿಂದೆ ಸಾರಿಗೆ ವ್ಯವಸ್ಥೆ ಇಲ್ಲದ ಕಾಲದಲ್ಲಿ ಜನರಿಗೆ ಅನ್ನ, ನೀರು, ಆಶ್ರಯ ನೀಡಿದ ಪುಣ್ಯ ಈ ಮಠಕ್ಕೆ ಸಲ್ಲುತ್ತದೆ. ವಿಜಯ ಮಹಂತೇಶ ಶಿವಯೋಗಿಗಳ ಪರಮ ಭಕ್ತರು, ಶ್ರೀಮಠದ ಪರಂಪರೆಯ ಶಿಷ್ಯರಲ್ಲಿ ವಸಂತಮಾಸ್ತರ್, ದಿ. ಎಂ. ಭೀಮಪ್ಪ ಮಾಸ್ತರು ಮಹಂತೇಶ ಸ್ವಾಮಿಗಳ ಬಗ್ಗೆ ನಾಟಕ, ಯಕ್ಷಗಾನಗಳನ್ನು ರಚಿಸುವ ಮೂಲಕ ನಾಟಕಗಳನ್ನು ಸ್ವಯಂ ಪಾತ್ರದಾರಿಗಳಾಗಿ ನಾಟಕಗಳನ್ನು ಪ್ರದರ್ಶಿಸಿದರು. ನಮ್ಮ ತಂದೆ ದಿ. ಎನ್.ಟಿ. ಬೊಮ್ಮಣ್ಣನವರು ಶ್ರೀಮಠದ ಭಕ್ತರಾಗಿದ್ದರು ಎಂದರು. ನಿರಂತರವಾಗಿ ಈ ಮಠಕ್ಕೆ ಬೇಕಾದ ಅನುಕೂಲತೆಗಳನ್ನು ಹಿರಿಯರಾದ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರ ಮಾರ್ಗದರ್ಶನದೊಂದಿಗೆ ಕಲ್ಪಿಸಲಾಗುವುದು ಎಂದು ಹೇಳಿದರು. ದಿವ್ಯ ಸಾನಿಧ್ಯ ಗುರುಮಹಾಂತ ಮಹಾಸ್ವಾಮಿಗಳು, ನೇತೃತ್ವವನ್ನು ಸಿದ್ದಯ್ಯನಕೋಟೆಯ ಶಾಖ ಮಠದ ಬಸವಲಿಂಗ ಮಹಾಸ್ವಾಮಿಗಳು, ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರುಗಳು ಮತ್ತು ಮಠದ ಆಡಳಿತ ಮಂಡಳಿ, ಊರಿನ ಗಣ್ಯರು ಇದ್ದರು. ಕಾರ್ಯದರ್ಶಿ ಕಾಂತರಾಜ ನಿರೂಪಿಸಿದರು. ರಾಮಸಾಗರಹಟ್ಟಿ ಗುರುಶಂಕ್ರಪ್ಪ ಮತ್ತು ತಂಡದವರಿಂದ ತತ್ವಪದಗಳ ಗಾಯನ ಕಾರ್ಯಕ್ರಮವನ್ನು ನೆರವೇರಿಸಿದರು.

# ಜೀತ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶ್ರಮಿಸಿ

## ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ | ದಿನದ ತರಬೇತಿ ಕಾರ್ಯಾಗಾರ



■ **ಹಂಪಿ ಟೈಮ್ಸ್ ಕೊಪ್ಪಳ**

ಜೀತ ಕಾರ್ಮಿಕ ಪದ್ಧತಿಯು ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದು, ಇಂತಹ ಅಮಾನವೀಯ ಪದ್ಧತಿಯನ್ನು ಹೋಗಲಾಡಿಸಲು ಹಾಗೂ ಜನರಲ್ಲಿ ಜಾಗೃತಿ ಮೂಡಿಸಲು ಅಧಿಕಾರಿಗಳು ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಸೋಮವಾರ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾರ್ಮಿಕ ಇಲಾಖೆ ಹಾಗೂ ಬೆಳಗಾವಿ (ಕೊಪ್ಪಳ ಘಟಕ) ಸ್ಪಂದನ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಜೀತ ಕಾರ್ಮಿಕ ಪದ್ಧತಿ ನಿರ್ಮೂಲನಾ ದಿನದ ಅಂಗವಾಗಿ ಕೊಪ್ಪಳ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಹಮ್ಮಿಕೊಳ್ಳಲಾದ ಒಂದು ದಿನದ ತರಬೇತಿ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು.

ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ 1976ರಲ್ಲಿ ಕಾಯ್ದೆ ಜಾರಿಗೆ ಬಂದಿದೆ. ರಾಜ್ಯದಲ್ಲಿ ಜೀತ ಪದ್ಧತಿಯನ್ನು ನಿಯಂತ್ರಣಗೊಳಿಸಿ ನಿರ್ಮೂಲನೆ ಮಾಡಲು ಜೀತ ಕಾರ್ಮಿಕ ಪದ್ಧತಿ ನಿಷೇಧ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಜಿಲ್ಲಾಧಿಕಾರಿಯಿಂದಗ್ರಾಮಆಡಳಿತಾಧಿಕಾರಿವರೆಗಿನ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿದೆ. ಜೀತ ಪದ್ಧತಿ ನಿರ್ಮೂಲನಾಧಿಕಾರಿಗಳು, ಜೀತ ಕಾರ್ಮಿಕ ಪ್ರಕರಣಗಳನ್ನು ಸೂಕ್ತ ಪ್ರಾಧಿಕಾರಕ್ಕೆ ವರದಿ ಮಾಡಬೇಕು. ಈ ಪದ್ಧತಿಯನ್ನು ತಡೆಯಲು ಸಹ ಕ್ರಮವಹಿಸಬೇಕು. ಜೀತ ಪದ್ಧತಿಗೆ ಒತ್ತಾಯಿಸಿದ ಆರೋಪಿಗಳ ವಿರುದ್ಧ ಪರಿಣಾಮಕಾರಿಯಾಗಿ ಅಭಿಯೋಜನೆಗೆ ಒಳಪಡಿಸಲು ಸಾಕ್ಷ್ಯ ಸಂಗ್ರಹಣೆಗೆ ಸಹಕರಿಸಬೇಕು ಎಂದರು.

ಜೀತ ಪದ್ಧತಿ ಶಿಕ್ಷಾರ್ಹ ಅಪರಾಧವೆಂದು, ಜೀತ ಪದ್ಧತಿಯನ್ನು ಮುಂದುವರೆಸುವಂತಿಲ್ಲವೆಂದು ಸಾರ್ವಜನಿಕರಿಗೆ, ಉದ್ಯಮಿಗಳಿಗೆ ಅರಿವು ಮೂಡಿಸಬೇಕು. ಈ ಕುರಿತು ಸಂವೇದನೆಯನ್ನು ಸಾರ್ವಜನಿಕರಲ್ಲಿ ಮೂಡಿಸಲು ಕ್ರಮ ವಹಿಸಬೇಕು. ಇದರ ಜೊತೆಗೆ ಜೀತ ವಿಮುಕ್ತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪೂರಕ ಕ್ರಮಗಳನ್ನು ಅನುಸರಿಸಬೇಕು. ಅವರಿಗೆ ಅಗತ್ಯವಿರುವ ಕಾನೂನು ಸಲಹೆ, ಪೊಲೀಸ್ ನೆರವು ಪಡೆಯಲು ಸಹಕರಿಸಬೇಕು ಹಾಗೂ ಜೀತ ವಿಮುಕ್ತ ಕಾರ್ಮಿಕರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರಯತ್ನಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಸುಧಾ ಜಿ ಗರಗ, ಮಾನವ ಕಳ್ಳ ಸಾಗಾಣಿಕೆ ಮತ್ತು ಜೀತ ಕಾರ್ಮಿಕ ಪದ್ಧತಿಯ ರಾಜ್ಯ ಉನ್ನತ ಸಮಿತಿ ಸದಸ್ಯರಾದ ವಿಲಿಯಂ ಕ್ರಿಸ್ಟೋಪರ್, ಯುನಿಸೆಫ್ ಪ್ರಾದೇಶಿಕ ಸಂಯೋಜಕ ರಾಘವೇಂದ್ರ ಭಟ್, ಯುನಿಸೆಫ್ ಸಂಯೋಜಕ ಹರೀಶ ಜ್ಯೋಗಿ, ಬೆಳಗಾವಿ ಸ್ಪಂದನ ಸಂಸ್ಥೆಯ ಕಾರ್ಯದರ್ಶಿ ವಿ.ಸುಶೀಲ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ನಿರ್ದೇಶಕ ಬಸವರಾಜ ಹಿರೇಗೌಡರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ವಿಲಿಯಂ ಕ್ರಿಸ್ಟೋಪರ್ ಅವರು ಜೀತ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು, ರಾಘವೇಂದ್ರ ಭಟ್ ಅವರು ಮಾನವ ಕಳ್ಳ ಸಾಗಾಣಿಕೆ ತಡೆ ಕಾಯ್ದೆ ಬಗ್ಗೆ ಹಾಗೂ ಹರೀಶ ಜ್ಯೋಗಿ ಅವರು ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಕುರಿತು ತರಬೇತಿ ನೀಡಿದರು. ಕೊಪ್ಪಳ ಜಿಲ್ಲೆಯ ಜೀತ ಪದ್ಧತಿ ನಿರ್ಮೂಲನಾಧಿಕಾರಿಗಳು ಇದ್ದರು.

# ಅಭಿವೃದ್ಧಿಯೇ ಗುರಿ ಸಹನೆ ಇರಲಿ



**ಮೊದಲ ಪುಟದಿಂದ**

ಬಲ ನೀಡಿದಂತಾಗಿದೆ. ಹರಪನಹಳ್ಳಿ ತಾಲೂಕಿನಿಂದಲೇ ದಿನನಿತ್ಯ 14 ಸಾವಿರ ಮಹಿಳೆಯರು ಶಕ್ತಿ ಯೋಜನೆಯಲ್ಲಿ ಪ್ರಯಾಣಿಸುತ್ತಿದ್ದಾರೆ. ಮಹಿಳೆಯರು ಉಚಿತವಾಗಿ ಪ್ರಯಾಣಿಸುವ ದರವನ್ನು ಸರ್ಕಾರ ಕೆಎಸ್‌ಆರ್‌ಟಿಸಿಗೆ ಭರಿಸುತ್ತಿರುವುದರಿಂದ ನಷ್ಟದಲ್ಲಿದ್ದ ಕೆಎಸ್ ಆರ್‌ಟಿಸಿಗೆ ಶಕ್ತಿ ನೀಡಿದಂತಾಗಿದೆ ಎಂದರು.

ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಕುರಿ ಶಿವಮೂರ್ತಿ ಮಾತನಾಡಿ, ಮಹಿಳಾ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ ಎಂದರು.

ತಾಲೂಕಿನ ಶೃಂಗಾರತೋಟದ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ಶಾಲೆಯ ಆವರಣದಲ್ಲಿ ನಿರ್ಮಿತವಾಗುತ್ತಿರುವ ಹಾಸ್ಟೆಲ್ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ದೇವರಾಜ ಅರಸ್ ನಿಗಮದಿಂದ ಅರ್ಹ 36 ಫಲಾನುಭವಿಗಳಿಗೆ ಟೈಲರಿಂಗ್ ಯಂತ್ರ ವಿತರಿಸಿದರು. ಪುರಸಭೆಯಿಂದ ಪಲಾನುಭವಿಗಳ ಮನೆ ಬಾಗಿಲಿಗೆ ಇ–ಸ್ವತ್ತು ಪ್ರಮಾಣ ಪತ್ರ ವಿತರಿಸಿದರು. ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರಿಗೆ ಸಮವಸ್ತ್ರ ವಿತರಿಸಿದರು. ಮಾಡ್ಲಗೇರಿ ಗ್ರಾಪಂ ವ್ಯಾಪ್ತಿಯ ವಸತಿ ಫಲಾನುಭವಿಗಳಿಗೆ ಆದೇಶ ಪತ್ರ ವಿತರಿಸಿದರು.

ಈ ವೇಳೆ ಪುರಸಭೆ ಅಧ್ಯಕ್ಷೆ ಫಾತಿಮಾ ಶೇಕ್ಷಾವಲಿ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ವೆಂಕಟೇಶ್, ಪುರಸಭೆ ಸದಸ್ಯರಾದ ರಾಮಣ್ಣ, ಪುರಸಭೆ ಸದಸ್ಯ ಎಂ.ವಿ.ಅಂಜಿನಪ್ಪ, ತಹಶೀಲ್ದಾರ್ ಬಿ.ವಿ.ಗಿರೀಶ್ ಬಾಬು, ಬಿಇಒ ಲೇಪಾಕ್ಷಪ್ಪ, ಪಂಚ ಗ್ಯಾರಂಟಿ ತಾಲೂಕು ಅಧ್ಯಕ್ಷರಾದ ಉದಯಶಂಕರ್, ಹೊಸಪೇಟೆ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಸೇರಿದಂತೆ ವಿವಿಧ ತಾಲೂಕು ಮಟ್ಟದ ಅಧಿಕಾರಿಗಳು, ಮುಖಂಡರು ಭಾಗವಹಿಸಿದ್ದರು.

For Advertisements : 9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ

1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್